# ಕನ್ನಡ ಸಾಹಿತ್ಯದಲ್ಲಿ ಬುದ್ಧನ ಮರು ನಿರೂಪಣೆ

**ಮಲ್ಲಿಕಾರ್ಜುನ ಎನ್.***

**DOI: https://doi.org/10.5281/zenodo.20106371**

**ABSTRACT**

ಸಮಾಜದ ನಿರಂತರ ಬದಲಾವಣೆಗಳು ಮತ್ತು ವಿಘಟನೆಗಳಿಗೆ ಬುದ್ಧನ ಸಮಾನತೆ, ಕರುಣೆ ಹಾಗೂ ಸರಳತೆಯ ತತ್ವಗಳು ಶಾಶ್ವತ ಪರಿಹಾರವನ್ನು ಒದಗಿಸುತ್ತವೆ. ಪ್ರಾಚೀನ ಭಾರತದಲ್ಲಿ ಅಶೋಕನಂತಹ ದೊರೆಗಳ ಬೆಂಬಲದಿಂದ ಬೌದ್ಧಧರ್ಮವು ಜಾಗತಿಕವಾಗಿ ಬೆಳೆಯಿತು. ಕರ್ನಾಟಕದಲ್ಲಿ ದೊರೆತ ಅಶೋಕನ ಶಾಸನಗಳು (ಬ್ರಾಹ್ಮಿ ಲಿಪಿ) ಹಾಗೂ ಸನ್ನತಿಯಂತಹ ನೆಲೆಗಳು ಇಲ್ಲಿನ ಬೌದ್ಧ ಪ್ರಭಾವವನ್ನು ಸಾಬೀತುಪಡಿಸುತ್ತವೆ. ಟಿ.ಎಸ್. ವೆಂಕಣ್ಣಯ್ಯನವರಂತಹ ವಿದ್ವಾಂಸರ ತರ್ಕದಂತೆ, ಬೌದ್ಧರೇ ಕನ್ನಡದ ಆದಿಕವಿಗಳಾಗಿದ್ದರೂ, ವೈದಿಕ ಧರ್ಮದ ಪುನರುತ್ಥಾನ, ಪುಷ್ಯಮಿತ್ರ ಶುಂಗನ ಆಕ್ರಮಣ ಹಾಗೂ ಇತರ ಧಾರ್ಮಿಕ ಸಂಘರ್ಷಗಳಿಂದಾಗಿ ಪ್ರಾಚೀನ ಕನ್ನಡ ಬೌದ್ಧ ಸಾಹಿತ್ಯವು ಸಂಪೂರ್ಣವಾಗಿ ನಾಶವಾಯಿತು. ಪ್ರಾಚೀನ ಕೃತಿಗಳು ನಷ್ಟವಾದರೂ, ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕುವೆಂಪು, ಜಿ.ಪಿ. ರಾಜರತ್ನಂ, ಕಾರಂತರಂತಹ ಅನೇಕ ಸೃಜನಶೀಲ ಲೇಖಕರು ಬುದ್ಧನ ತತ್ವಗಳನ್ನು ಮರುನಿರೂಪಿಸುವ ಮೂಲಕ ಆ ಸಾಹಿತ್ಯವನ್ನು ಮತ್ತೆ ಶ್ರೀಮಂತಗೊಳಿಸಿದ್ದಾರೆಂಬುದನ್ನು ಇಲ್ಲಿ ಚರ್ಚಿಸಲಾಗಿದೆ.

**KEYWORDS:** ಬುದ್ಧನ ಮರುನಿರೂಪಣೆ, ಪ್ರಾಚೀನ ಬೌದ್ಧ ಸಾಹಿತ್ಯ, ಕನ್ನಡದ ಆದಿಕವಿಗಳು, ಸಾಮಾಜಿಕ ಬದಲಾವಣೆ, ಬೌದ್ಧ ಧರ್ಮದ ಅವನತಿ.

* **ಮಲ್ಲಿಕಾರ್ಜುನ ಎನ್.,** ಸಂಶೋಧನಾರ್ಥಿ, ಡಾ. ಡಿ. ವಿ. ಗುಂಡಪ್ಪ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಮಾನವ ಜೀವನವು ನಿರಂತರ ಬದಲಾವಣೆಗಳಿಗೆ ಒಳಪಡುತ್ತದೆ. ಮಾನವನಿಗೆ ಗತಕಾಲದ ಅನುಭವವಿದ್ದರೂ ಭವಿಷ್ಯದ ಬಗೆಗೆ ಖಚಿತವಾದ ತಿಳುವಳಿಕೆ ಇಲ್ಲ. ಸಾಮಾಜಿಕ ಬದಲಾವಣೆಯು ತತ್ವಗಳ ಕ್ರಿಯೆಯಲ್ಲಿ ವ್ಯಕ್ತಿ, ಕುಟುಂಬ, ಸಮುದಾಯ, ರಾಷ್ಟ್ರ ಇತ್ಯಾದಿಗಳು ಸಕ್ರಿಯವಾಗಿ ಪಾಲ್ಗೊಳ್ಳುತ್ತವೆ. ಹಳೆಯ ಸತ್ಯಗಳು ಕ್ಷಣ ಭಂಗುರವಾಗುತ್ತವೆ. ಒಂದು ಕಡೆ ಅವಿಶ್ರಾಂತ ಗುಣವುಳ್ಳ ಚೈತನ್ಯಮಯವಾದ ಸಾಮಾಜಿಕ ಬದಲಾವಣೆ, ಇನ್ನೊಂದೆಡೆ, ಸಾಮಾಜಿಕ ಸಂಘಟನೆ ಸಮಾಜವನ್ನು ಸ್ಥಿರ ಅವಸ್ಥೆಗೆ ಎಳೆಯುತ್ತವೆ. ಇಂತಹ ನಿರಂತರ ಬದಲಾವಣೆಗಳಿಗೆ ಒಳಗಾಗುವ ಸಮಾಜದಲ್ಲಿ, ಜನರಿಗೆ ಹೊಸ ಸನ್ನಿವೇಶಗಳನ್ನು ಎದುರಿಸುವುದು ಅನಿವಾರ್ಯ. ಹೊಸ ಸಮಸ್ಯೆಗಳನ್ನೆದುರಿಸುವಾಗ ಹೊಸ ರೀತಿಯ ಸಾಮಾಜಿಕ ಬದಲಾವಣೆಯ ತತ್ವಗಳು ನಡತೆಯನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಕೆಲ ವೇಳೆ ಜನರು ಅನುಭವದಿಂದ, ಕುಶಲತೆಯಿಂದ ಹೊಸದಾಗಿ ಒಡ್ಡಿದ ಸನ್ನಿವೇಶಗಳನ್ನು ಸಾಮಾಜಿಕ ತತ್ವಗಳನ್ನು ಎದುರಿಸಬೇಕಾಗುತ್ತದೆ. ಕೆಲವು ಸಲ ಅನುಭವದ ಅಭಾವದ ಮೂಲಕ ಹೊಸ ಸಮಸ್ಯೆಗಳ ತತ್ವಗಳನ್ನು ಸರಿಯಾಗಿ ಎದುರಿಸದೆ ಅನಿವಾರ್ಯವಾಗಿ ಸಮಾಜದೊಂದಿಗೆ ವಿರಸ ಕಟ್ಟಿಕೊಳ್ಳಬೇಕಾಗುತ್ತದೆ. ಇಂತಹ ಸಮಯದಲ್ಲಿಯೇ ಬುದ್ಧನ ತಾತ್ವಿಕ ಚಿಂತನೆಗಳು ಈ ಎಲ್ಲಾ ಗೊಂದಲಗಳಿಗೆ ಪರಿಹಾರೋಪಾಯಗಳನ್ನು ಕಂಡುಕೊಳ್ಳಲು ನೆರವಾಗುತ್ತವೆ. ಈ ನಿಟ್ಟಿನಲ್ಲಿ ಸುಂದರ ಸಮಾಜ ನಿರ್ಮಾಣದ ಕನಸು ಕಂಡ ಬುದ್ಧ ಪರಿಣಾಮಕಾರಿ ಸಾಮಾಜಿಕ ಬದಲಾವಣೆಯ ತತ್ವಗಳನ್ನು ಬೋಧಿಸಿದ್ದಾನೆ.

ಸೌಮ್ಯ ಸ್ವರೂಪದ ಸಾಮಾಜಿಕ ಬದಲಾವಣೆಗಳು ಒಂದಿಲ್ಲೊಂದು ವಿವಿಧ ಸಾಮಾಜಿಕ ವಿಘಟನೆಗೆ ಎಡೆಮಾಡಿಕೊಡುತ್ತವೆ. ಸಮಾಜವು ಸಾಮಾಜಿಕ ವಿಘಟನೆ ಉಗ್ರರೂಪತಾಳಿ, ಸಾಮಾಜಿಕ ಬದಲಾವಣೆ ಹಾಗೂ ಸಾಮಾಜಿಕ ವಿಘಟನೆ ಇರದ ಸಮಾಜ ಅಸಾಧ್ಯ. ಗಿಡ್ಡಿಂಗ್ಸ್ ಎಂಬ ಸಮಾಜಶಾಸ್ತ್ರಜ್ಞನು "ಚೈತನ್ಯಮಯವಾದ ಸಾಮಾಜಿಕ ಪ್ರಕ್ರಿಯೆ, ಸಮಾಜದ ಘಟಕಗಳಲ್ಲಿ ನಿರಂತರವಾದ ಹೊಂದಾಣಿಕೆಯನ್ನು ಕಲ್ಪಿಸಿಕೊಡುತ್ತದೆ. ಸಮಾಜದ ರಚನೆಯ ಅವಿಭಾಜ್ಯ ಅಂಗವಾದ ಕೆಲವು ಸಂಸ್ಥೆಗಳಲ್ಲಿ, ರೀತಿ-ನೀತಿಗಳಲ್ಲಿ, ಆಚಾರ-ವಿಚಾರಗಳಲ್ಲಿ, ಸಾಮಾಜಿಕ ವಿಘಟನೆಗೆ ಕಾರಣೀಭೂತವಾಗಬಹುದು"[1] ಎಂದು ಹೇಳುತ್ತಾನೆ.

ಜಗತ್ತಿನಲ್ಲಿ ಒಂದಿಲ್ಲೊಂದು ಬಗೆಯ ಬದಲಾವಣೆಗಳು ನಡೆದಿದ್ದೇ ಇವೆ. ಆದರೆ ಇಂದಿನ ಔದ್ಯೋಗೀಕರಣ ಹೊಂದಿದ ಸಮಾಜದ ಜೊತೆಗೆ ಹೋಲಿಸಿ ನೋಡಿದಾಗ ಹಿಂದಿನ ಕಾಲದ ಔದ್ಯೋಗಿಕರಣ ಹೊಂದದ ಸಮಾಜದಲ್ಲಿ ಜೀವನ ಹೆಚ್ಚು ಸ್ಥಿರ ಸ್ವರೂಪದ್ದಾಗಿತ್ತು. ನಿರುದ್ಯೋಗ, ವಸತಿ, ಕೌಟುಂಬಿಕ ವಿಘಟನೆ, ನೈತಿಕ ಅಧಃಪತನ ಮುಂತಾದ ಸಮಸ್ಯೆಗಳು ಅಷ್ಟೊಂದು ತೀವ್ರ ಸ್ವರೂಪ ತಾಳಿರಲಿಲ್ಲ. ಈ ಸಮಾಜದಲ್ಲಿ ಹೊಸ ಹೊಸ ಅಂಶಗಳನ್ನು ಅಳವಡಿಸಿಕೊಳ್ಳುವ ಕ್ರಿಯೆ ನಿಧಾನವಾಗಿದ್ದಾಗ, ಸಾಮಾಜಿಕ ಸಂಘಟನೆ ಸ್ಥಿರ ಸ್ವರೂಪ ಪಡೆಯುತ್ತದೆ. ಜನಸಂಖ್ಯೆ ಅಧಿಕಗೊಂಡರೆ ಮತ್ತು ಜೀವನ ಪದ್ಧತಿ ಹೆಚ್ಚು ನವೀನಗೊಂಡಂತೆ ಸಾಮಾಜಿಕ

ಸಂಘಟನೆಯ ಸ್ಥಿರ ಸ್ವರೂಪ ಪಲ್ಲಟಗೊಳ್ಳುತ್ತದೆ. ಸಮಾಜದಲ್ಲಿ ಸಾಮಾಜಿಕ ಸಮಸ್ಯೆಗಳು ಹೆಚ್ಚು ಸಂಕೀರ್ಣವಾಗಿರುವುದರಿಂದ ಸಾಮಾಜಿಕ ಹೊಂದಾಣಿಕೆಯ ಸಮಸ್ಯೆಗಳು ಎದುರಿಸಬೇಕಾಗುತ್ತದೆ. ಭೌತಿಕ ಹಾಗೂ ಅಭೌತಿಕ ಸಂಸ್ಕೃತಿಗಳಲ್ಲಿ ಸಾಮಾಜಿಕ ಬದಲಾವಣೆಗಳು ತ್ವರಿತಗತಿಯಿಂದ ರೂಪುಗೊಳ್ಳುತ್ತಿವೆ. ಅದಕ್ಕೆ ನಿದರ್ಶನವೇ ಬುದ್ಧನ ಸಾಮಾಜಿಕ ಬದಲಾವಣೆಯ ತತ್ವಗಳು. ಬುದ್ಧನ ಮಹಾನ್ ಮೇಧಾವಿತನ ಅವನ ವ್ಯಕ್ತಿತ್ವದಲ್ಲಿ ಪ್ರತಿಬಿಂಬಿಸುತ್ತದೆ. ಅವನ ಸಾಮಾಜಿಕ ಬದಲಾವಣೆಯ ತತ್ವಗಳು ಪ್ರತಿಮಾನವನ ಹೃದಯ ಬಾಗಿಲನ್ನು ತೆರೆಯುವುದಲ್ಲದೆ ಸಮಾಜದ ಉನ್ನತಿಗಾಗಿ ಅವನ ತತ್ವಗಳು ಅಪಾರ. ಬುದ್ಧನ ಬೋಧನೆಗಳೇ ಸಾಮಾಜಿಕ ಬದಲಾವಣೆಯ ತತ್ವಗಳಾಗಿ ಪ್ರತಿಬಿಂಬಿಸಿವೆ.

ಬುದ್ಧನು ತನ್ನ ದಿವ್ಯ ವ್ಯಕ್ತಿತ್ವ, ವಾಗ್ಮಿತೆ ಮತ್ತು ಸಂಘಟನಾ ಕೌಶಲ್ಯದಿಂದ ಉತ್ತರ ಭಾರತದ ಅನೇಕ ಸ್ಥಳಗಳಲ್ಲಿ ತನ್ನ ತಾತ್ವಿಕ ಚಿಂತನೆಗಳನ್ನು ಪ್ರಚಾರಮಾಡಿದನು. ಈತನು ಸರಳತೆ, ತ್ಯಾಗ, ಪ್ರಾಮಾಣಿಕತೆ, ಪ್ರೇಮ ಮತ್ತು ಕಾರುಣ್ಯದ ಸಾಕಾರ ಮೂರ್ತಿಯಾಗಿದ್ದನು. ಆಕರ್ಷಕ ವ್ಯಕ್ತಿತ್ವದಿಂದ ಎಂತಹ ವ್ಯಕ್ತಿಯನ್ನಾದರೂ ಗೆಲ್ಲುತ್ತಿದ್ದನು. ಸಮಾಜವೇ ಈತನ ವ್ಯಕ್ತಿತ್ವವನ್ನು ಆಗಲೇ ಗುರುತಿಸಿತ್ತು. ತಿದ್ದಲಾಗದ ಹೃದಯಗಳನ್ನು ತಿದ್ದಿದ ಮಹಾನುಭಾವ ಎಂಬ ಹೆಸರಿಗೆ ವಿಖ್ಯಾತನಾಗಿದ್ದಾನೆ. ತನ್ನನ್ನು ಸಂದರ್ಶಿಸಿದ ವ್ಯಕ್ತಿಗಳ ಸ್ವಭಾವವನ್ನು ಅರಿತುಕೊಳ್ಳುವ ಅಸಾಧಾರಣ ಸಾಮರ್ಥ್ಯ ಈತನಿಗಿತ್ತು. ಈತನು ಜನಭಾಷೆಯಾಗಿದ್ದ 'ಪಾಲಿ' ಭಾಷೆಯಲ್ಲಿ ನೀತಿಕತೆಗಳ, ಉಪಮೆಗಳ ಹಾಗೂ ರೂಪಕ ಕತೆಗಳ ಮೂಲಕ ತನ್ನ ಬೋಧನೆಗಳನ್ನು ಜನರಿಗೆ ಸುಲಭವಾಗಿ ತಿಳಿಯುವ ರೀತಿಯಲ್ಲಿ ಸಾಮಾಜಿಕ ಬದಲಾವಣೆಗಳನ್ನು ಗುರುತಿಸಿ ಬೋಧಿಸಿದನು. ಬುದ್ಧನು ತನ್ನ ದಿವ್ಯ ವ್ಯಕ್ತಿತ್ವ ಮತ್ತು ಸದ್ಬೋಧನೆಗಳಿಂದ "ಏಷ್ಯಾದ ಜ್ಞಾನ ಪ್ರದೀಪ" (The Light Of Asia) ಆದನೆಂದು ಸರ್ ಎಡ್ವಿನ್ ಆರ್ನಾಲ್ಡ್ ಹೇಳಿದ್ದಾರೆ. ಬುದ್ಧನು "ಜಗತ್ತಿನ ಜ್ಞಾನ ಪ್ರದೀಪ"ನಾಗುವನೆಂದು ಶ್ರೀಮತಿ ರಿಸ್ ಡೇವಿಡ್ಸ್ ಹೇಳಿದ್ದಾರೆ.[2] ಬುದ್ಧನು ತನ್ನ ಜೀವಿತಾವಧಿಯಲ್ಲಿ ಸಮಾಜಕ್ಕೆ ತನ್ನ ತಾತ್ವಿಕ ಚಿಂತನೆಗಳನ್ನು ಪ್ರಸಾರಗೊಳಿಸಿದನು.

ಬುದ್ಧನ ನೀತಿಪರವಾದ ಸಾಮಾಜಿಕವಾದ ಸರಳ ತತ್ವಗಳು ಧಾರ್ಮಿಕ ಗೊಂದಲಕ್ಕೀಡಾಗಿದ್ದ ಆ ಕಾಲದ ಜನತೆಗೆ ತುಂಬಾ ಹಿಡಿಸಿದವು. ಬುದ್ಧನು ಪರಿಶುದ್ಧವಾದ ಸರಳ ಜೀವನಕ್ಕೆ ಮಹತ್ವ ಕಲ್ಪಿಸಿದನು. ಈತನು ತೋರಿದ ಅಷ್ಟಾಂಗ ಮಾರ್ಗವು ಅತಿಶಯವಾದ ಭೋಗ ಮತ್ತು ಕಠೋರವಾದ ದೇಹದಂಡನೆಯ ಅತಿರೇಕಗಳನ್ನು ತ್ಯಜಿಸಿದ ಮಧ್ಯಮ ಮಾರ್ಗವಾಗಿತ್ತು. ಬುದ್ಧನು ಬೋಧಿಸಿದ ಸಮಾನತೆಯ ತತ್ವಗಳು ಕೆಳವರ್ಗಗಳ ಜನರಿಗೆ ಸ್ವಾತಂತ್ರ್ಯವನ್ನು ಒದಗಿಸಿದವು ಹಾಗೂ ಸರಳ ಜೀವನವನ್ನು ನಡೆಸಲು ನೆರವಾದವು. ಬುದ್ಧ ತೋರಿದ ಮಧ್ಯಮ ಮಾರ್ಗದಲ್ಲಿ ಗೊಂದಲವನ್ನುಂಟು ಮಾಡುವ ಗಹನ ತತ್ವಜ್ಞಾನವಾಗಲಿ, ದುಂದುವೆಚ್ಚದ ಯಜ್ಞಯಾಗಾದಿಗಳ ಮತಾಚಾರಣೆಗಳಾಗಲಿ, ಮೇಲು-ಕೀಳೆಂಬ ಭಾವನೆಗಳನ್ನು ಪ್ರಚೋದಿಸುವ ಜಾತಿಭೇದಗಳಾಗಲಿ ಜನತೆಯನ್ನು ಶೋಷಣೆಗೆ

ಗುರಿಪಡಿಸುವ ಪುರೋಹಿತ ವರ್ಗವಾಗಲಿ ಇರಲಿಲ್ಲ. ಆಡುಭಾಷೆಯಲ್ಲಿ ಬೋಧಿಸಲ್ಪಟ್ಟ ಈ ಸರಳ ಧರ್ಮದ ಸಾಮಾಜಿಕ ತತ್ವಗಳು ಶೀಘ್ರಗತಿಯಲ್ಲಿ ಸಾಮಾಜಿಕ ಬದಲಾವಣೆಗೆ ನಾಂದಿ ಹಾಡಿದವು.

ಮಹಾನ್ ಸಂಘಟಕನಾಗಿದ್ದ ಬುದ್ಧನು ರಚಿಸಿದ ಸಂಘವು ಕಾಲಾನುಕ್ರಮದಲ್ಲಿ ಬಲಾಢ್ಯವಾಗಿ ಹೆಮ್ಮರವಾಗಿ ಬೆಳೆಯಿತು. ಸಮಾಜದಲ್ಲಿ ನೈತಿಕ ಜಾಗೃತಿಯನ್ನುಂಟು ಮಾಡುವುದು ಈ ಸಂಘದ ಮೂಲೋದ್ದೇಶವಾಗಿತ್ತು. ಬೌದ್ಧ ಸಂಘದ ಭಿಕ್ಕು-ಭಿಕ್ಕುಣಿಯರು ನಡೆಸುತ್ತಿದ್ದ ಪರಿಶುದ್ಧವಾದ ಹಾಗೂ ಸರಳ ಜೀವನವು ಜನಸಾಮಾನ್ಯರ ಮೇಲೆ ಗಾಢವಾದ ಪರಿಣಾಮವನ್ನುಂಟು ಮಾಡಿತು. ಅವರು ತಮ್ಮ ತ್ಯಾಗ, ಸೇವಾಕಾರ್ಯಗಳಿಂದ ಜನತೆಯ ಹೃದಯವನ್ನು ಗೆದ್ದುಕೊಂಡರು. ಅಪಾರವಾದ ಪ್ರೀತಿ ವಿಶ್ವಾಸಗಳನ್ನು ಹೊಂದಿದ್ದ ಬೌದ್ಧಭಿಕ್ಕುಗಳು ಭಾರತದ ಹೊರ ದೇಶಗಳಲ್ಲಿಯೂ ಬುದ್ಧನ ತಾತ್ವಿಕ ಚಿಂತನೆಗಳನ್ನು ಹರಡಿದರು.

ಬೌದ್ಧಧರ್ಮಕ್ಕೆ ಆರಂಭದಲ್ಲಿ ಬಿಂಬಿಸಾರ ಮತ್ತು ಅಜಾತಶತ್ರು ಧರ್ಮಕ್ಕೆ ಪ್ರೋತ್ಸಾಹ ನೀಡಿದರು. ಮುಂದೆ ಈ ಧರ್ಮವು ಅಶೋಕ, ಕನಿಷ್ಕ, ಮಿನಾಂಡರ್ ಮತ್ತು ಹರ್ಷವರ್ಧನರಂತಹ ಮಹಾದೊರೆಗಳ ಬೆಂಬಲವನ್ನು ಪಡೆದು ಅಂತರರಾಷ್ಟ್ರೀಯ ಧರ್ಮವಾಯಿತು. ಅಶೋಕನು ಧರ್ಮದ ತತ್ವಗಳ ಪ್ರಸಾರಕ್ಕಾಗಿ ತನ್ನ ಆಡಳಿತ ಯಂತ್ರವನ್ನು ಉಪಯೋಗಿಸಿದನು. ಈತನು ಭಾರತವಲ್ಲದೆ ಇತರೆ ದೇಶಗಳಾದ ಸಿಂಹಳ, ಬರ್ಮಾ, ಮಯನ್ಮಾರ್, ಈಜಿಪ್ಟ್, ಗ್ರೀಸ್ ಮುಂತಾದ ಹೊರ ನಾಡುಗಳಿಗೆ ಬೌದ್ಧ ಮತ ಪ್ರಚಾರಕರನ್ನು ಕಳಿಸಿ ಬುದ್ಧನ ತತ್ವಗಳನ್ನು ವ್ಯಾಪಕವಾಗಿ ಪ್ರಚುರಗೊಳಿಸಿದನು. ಸ್ಥಳೀಯವಾಗಿದ್ದ ಬೌದ್ಧ ಮತವನ್ನು ಜಾಗತಿಕ ಧರ್ಮದ ಮಟ್ಟಕ್ಕೆ ಏರಿಸಿದ ಶ್ರೇಯಸ್ಸು ಅಶೋಕನಿಗೆ ಸಲ್ಲುತ್ತದೆ. ಕುಶಾಣರ ಪ್ರಖ್ಯಾತ ದೊರೆ ಕನಿಷ್ಕನೂ ಕೂಡ ಈ ಧರ್ಮದ ಪ್ರಚಾರಕ್ಕಾಗಿ ಶ್ರಮಿಸಿದನು. ಅಂತೆಯೇ ಬೌದ್ಧ ವಿದ್ವಾಂಸರು ಕನಿಷ್ಕನನ್ನು 'ಎರಡನೆಯ ಅಶೋಕ' ಎಂದು ಕರೆದಿದ್ದಾರೆ. ಈತನ ಕಾಲದಲ್ಲಿ ಬೌದ್ಧಮತ ಪ್ರಚಾರಕರ ನಿಯೋಗವೊಂದು ಚೀನಾಕ್ಕೆ ಹೋಗಿ ಅಲ್ಲಿ ಈ ಧರ್ಮವನ್ನು ವ್ಯಾಪಕವಾಗಿ ಹರಡಿತು. ಬೌದ್ಧಧರ್ಮವು ಕಾಲಕ್ರಮೇಣ ಪೂರ್ವಏಷ್ಯಾದ ನಾಡುಗಳಲ್ಲಿ ಹರಡಿತು. ಕನಿಷ್ಕನ ಕಾಲದಲ್ಲಿ ಮಹಾಯಾನ ಬೌದ್ಧ ಪಂಥವು ಜನಪ್ರಿಯವಾಯಿತು.

ವಿಶಾಲ ದೃಷ್ಟಿಕೋನ ಮತ್ತು ಹೊಂದಾಣಿಕೆಯ ಪ್ರವೃತ್ತಿಯನ್ನು ಹೊಂದಿದ್ದ ಬೌದ್ಧಧರ್ಮ ಜಾತಿ, ಲಿಂಗ, ಭಾಷೆ, ಜನಾಂಗಗಳ ಭೇದಗಳನ್ನು ಎಣಿಸದೆ ಎಲ್ಲಾ ಜನರಿಗೂ ತನ್ನಲ್ಲಿ ಪ್ರವೇಶ ನೀಡಿತು. ಇದರ ಹೊಂದಾಣಿಕೆಯ ಪ್ರವೃತ್ತಿಯಿಂದಾಗಿ ಅಸಂಖ್ಯಾತ ಪರಕೀಯರು ಈ ಧರ್ಮದಲ್ಲಿ ಸೇರಿ ಹೋದರು. ಬುದ್ಧನ ಪರಿನಿರ್ವಾಣದ ಅಲ್ಪಾವಧಿಯ ನಂತರ ಆತನ ಪ್ರಮುಖ ಶಿಷ್ಯರು ರಾಜಗೃಹದಲ್ಲಿ ಸಭೆ ಸೇರಿ ಬುದ್ಧನು ಬೋಧಿಸಿದ ಸಾಮಾಜಿಕ ಬದಲಾವಣೆಯ ತಾತ್ವಿಕ ಚಿಂತನೆಗಳನ್ನು ಹಾಗೂ ಬೌದ್ಧ ಸಂಘದ ನಿಯಮಗಳನ್ನು ಕ್ರೋಢೀಕರಿಸಿದರು. ರಾಜಗೃಹದ ಈ

ಬೌದ್ಧ ಪರಿಷತ್ತು 'ಧಮ್ಮ' ಮತ್ತು 'ವಿನಯ' ಎಂಬ ಧರ್ಮ ಗ್ರಂಥಗಳನ್ನು ರೂಪಿಸಿತು. ಒಂದು ಶತಮಾನದ ನಂತರ ವೈಶಾಲಿಯಲ್ಲಿ ಸೇರಿದ್ದ ಎರಡನೆಯ ಬೌದ್ಧ ಪರಿಷತ್ತು ಬೌದ್ಧಧರ್ಮ ಗ್ರಂಥಗಳನ್ನು ಪರಿಷ್ಕರಿಸಿತು. ಅಶೋಕನ ಆಳ್ವಿಕೆಯ ಕಾಲದಲ್ಲಿ ಪಾಟಲಿಪುತ್ರದಲ್ಲಿ ಸೇರಿದ್ದ ಮೂರನೆಯ ಬೌದ್ಧ ಪರಿಷತ್ತು ಬೌದ್ಧಧರ್ಮ ಗ್ರಂಥಗಳ ಅಂತಿಮ ಪರಿಷ್ಕರಣದ ಕಾರ್ಯವನ್ನು ಪೂರೈಸಿತು. ಕನಿಷ್ಕನು ಕಾಶ್ಮೀರದಲ್ಲಿ ನೆರವೇರಿಸಿದ ನಾಲ್ಕನೆಯ ಬೌದ್ಧ ಪರಿಷತ್ತು ಬೌದ್ಧಧರ್ಮ ಗ್ರಂಥಗಳ ಮೇಲೆ 'ಉಪದೇಶ ಶಾಸ್ತ್ರಗಳು' ಮತ್ತು 'ವಿಭಾಷಾ ಶಾಸ್ತ್ರಗಳು' ಎಂಬ ಭಾಷ್ಯಗಳನ್ನು ರೂಪಿಸಿತು. ಕೊನೆಯದಾದ ಮಹತ್ವದ ಬೌದ್ಧ ಪರಿಷತ್ತು ಹರ್ಷವರ್ಧನನ ಆಳ್ವಿಕೆಯಲ್ಲಿ ಕನೋಜಿನಲ್ಲಿ ಸೇರಿತು. ಇದು ಮಹಾಯಾನ ಪಂಥದ ಹಿರಿಮೆಯನ್ನು ಸಾರಿತು.

ಬುದ್ಧನ ಉಪದೇಶಗಳು 'ಧಮ್ಮಪದ' ಮತ್ತು 'ಸುತ್ತನಿಪಾತ' ಎಂಬ ಎರಡು ಪಾಲಿ ಗ್ರಂಥಗಳಲ್ಲಿ ಸಂಗ್ರಹಿಸಲ್ಪಟ್ಟಿವೆ. ಪಾಲಿ ಸಾಹಿತ್ಯದಲ್ಲಿ ತ್ರಿಪಿಟಕಗಳು (ಸುತ್ತಪಿಟಕ, ವಿನಯ ಪಿಟಕ, ಅಭಿದಮ್ಮ ಪಿಟಕ) ಬೌದ್ಧಧರ್ಮದ ಮಹತ್ವ ಧರ್ಮಗ್ರಂಥಗಳಾಗಿವೆ. ಜಾತಕ ಕಥೆಗಳು ಬೌದ್ಧ ಧಾರ್ಮಿಕ ಸಾಹಿತ್ಯದ ಅತ್ಯಂತ ರಸವತ್ತಾದ ಭಾಗವೆಂದು ಹೇಳಬಹುದು. ಬೌದ್ಧ ಧಾರ್ಮಿಕ ಸಾಹಿತ್ಯವು ಬೌದ್ಧಧರ್ಮದ ಇತಿಹಾಸ ರಚನೆಗೆ ಉಪಯುಕ್ತವಾಗಿರುವುದಲ್ಲದೆ ಬುದ್ಧನ ಹಾಗೂ ಅನಂತನದ ಕಾಲದ ರಾಜಕೀಯ ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ವಿಪುಲ ಮಾಹಿತಿ ನೀಡುತ್ತದೆ. ಬುದ್ಧನ ಸಾಮಾಜಿಕ ಬದಲಾವಣೆಯ ತತ್ವಗಳೇ ಅವನ ಬೋಧನಾ ಸಂದೇಶಗಳಾಗಿವೆ.

ಭಾರತದಲ್ಲಿ ಧರ್ಮಕ್ಕೂ, ಸಾಹಿತ್ಯಕ್ಕೂ ಇರುವ ನಂಟು ನಿಕಟವಾದದ್ದು. ಭಾರತೀಯ ಧರ್ಮ ಎನ್ನುವಾಗ 'ವೈದಿಕ' ಎನ್ನುವ ಅರ್ಥಕ್ಕೆ ಸೀಮಿತಗೊಳಿಸಿ ಹೇಳುವುದುಂಟು. ಆದರೆ ನಿಜವಾದ ಅರ್ಥದಲ್ಲಿ ಭಾರತೀಯ ಧರ್ಮ ಎನ್ನುವುದು ವೈದಿಕ ಧರ್ಮದ ಜೊತೆಯಲ್ಲಿ ಬೌದ್ಧ, ಜೈನ ಮತ್ತಿತರ ಶಿಷ್ಟ ಧರ್ಮಗಳನ್ನೂ, ಭಾರತದ ಜನಪದ ಧರ್ಮವನ್ನು ಒಳಗೊಳ್ಳುತ್ತದೆ. ಪ್ರಾಚೀನ ಕಾಲದಿಂದ ಭಾರತೀಯ ಸಾಹಿತ್ಯದ ಮೇಲೆ ಪ್ರಭಾವ ಬೀರಿದ ಮೂರು ಮುಖ್ಯ ಧರ್ಮಗಳೆಂದರೆ – ವೈದಿಕ, ಬೌದ್ಧ, ಮತ್ತು ಜೈನ ಧರ್ಮಗಳಾಗಿದ್ದವು. ಈ ಎಲ್ಲಾ ಧರ್ಮಗಳು ಭಾರತೀಯ ಸಾಹಿತ್ಯದ ಮೇಲೆ ತಮ್ಮದೇ ಆದ ಪ್ರಭಾವವನ್ನು ಬೀರಿವೆ.

ಮೌರ್ಯ ಸಾಮ್ರಾಜ್ಯದ ಶ್ರೇಷ್ಠ ಅರಸನಾದ ಅಶೋಕನ ಕಾಲದಲ್ಲಿ ಭಾರತದ ರಾಷ್ಟ್ರೀಯ ಧರ್ಮ ಬೌದ್ಧ ಧರ್ಮವಾಗಿತ್ತು. "ಸುಮಾರು ಎರಡು ಸಾವಿರದ ಮುನ್ನೂರು ವರ್ಷಗಳ ಹಿಂದೆ ಈ ಕನ್ನಡ ನಾಡು ಮೌರ್ಯರ ಆಳ್ವಿಕೆಗೆ ಒಳಪಟ್ಟಿತ್ತು. ದೇವನಾಂಪ್ರಿಯ ಪ್ರಿಯದರ್ಶಿ ಅಶೋಕನ ರಾಜ್ಯದ ದಕ್ಷಿಣದ ರಾಜಧಾನಿ 'ಸುವರ್ಣಗಿರಿ' ಆಗಿತ್ತೆಂದು ಅವನ ಶಾಸನಗಳು ಹೇಳುತ್ತವೆ. ಅಲ್ಲಿಗೆ ಧರ್ಮ ಮಹಾಮಾತ್ರರನ್ನು ನೇಮಕ ಮಾಡಿದ್ದನು. ಆ ಸುವರ್ಣಗಿರಿಯೇ ಸನ್ನತಿ ಇರಬಹುದೆಂದು ಹಲವು ವಿದ್ವಾಂಸರ ವಾದ"[3]ವಾಗಿದೆ. ಕರ್ನಾಟಕದ ಮಸ್ಕಿ ಶಾಸನ

ಸಿಗುವುದಕ್ಕಿಂತ ಪೂರ್ವದಲ್ಲಿ 'ದೇವನಾಂಪ್ರಿಯ ಪ್ರಿಯದರ್ಶಿ' ಎಂದು ಹಲವು ಶಾಸನಗಳಲ್ಲಿ ಉಲ್ಲೇಖವಿತ್ತು. ಆದರೆ ಈ ಶಾಸನಗಳು ಯಾವ ದೊರೆಗೆ ಸಂಬಂಧಿಸಿದವು ಎನ್ನುವುದರ ಬಗ್ಗೆ ಭಿನ್ನಾಭಿಪ್ರಾಯವಿತ್ತು. ಕರ್ನಾಟಕದ ರಾಯಚೂರು ಜಿಲ್ಲೆಯ ಮಸ್ಕಿಯಲ್ಲಿ ದೊರೆತ ಶಾಸನದಲ್ಲಿ 'ದೇವನಾಂಪ್ರಿಯ ಪ್ರಿಯದರ್ಶಿ ಅಶೋಕ' ಎಂದು ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ.

ಅಶೋಕನ ಕಾಲದ ದಕ್ಷಿಣದ ರಾಜಧಾನಿ ಸುವರ್ಣಗಿರಿಯೇ ಸನ್ನತಿ ಇರಬಹುದೆಂದು ಹಲವು ವಿದ್ವಾಂಸರ ವಾದವಾಗಿದೆ. ಈಗಲೂ ಕೂಡ ಕಲಬುರಗಿ ಜಿಲ್ಲೆಯ 'ಸನ್ನತಿ'ಯಲ್ಲಿ ಉತ್ಖನನ ಮಾಡಿದರೆ ಬೌದ್ಧ ಧರ್ಮಕ್ಕೆ ಸಂಬಂಧಿಸಿದ ದಾಖಲೆಗಳು ಹಾಗೂ ಬುದ್ಧನ ವಿಗ್ರಹಗಳು ದೊರೆಯುತ್ತವೆ. ಆದ ಕಾರಣ ಪ್ರಾಚ್ಯ ವಸ್ತು ಸಂಗ್ರಹಾಲಯದವರು ಬೌದ್ಧ ಧರ್ಮದ ಬಗ್ಗೆ ಆಸಕ್ತಿವಹಿಸಿ ಬೌದ್ಧ ಸಂಸ್ಕೃತಿಯನ್ನು ಉಳಿಸುವಂತ ಮತ್ತು ಬೆಳೆಸುವಂತ ಕಾರ್ಯವನ್ನು ಮಾಡಬೇಕು. ಏಕೆಂದರೆ, ವೈಜ್ಞಾನಿಕ ತಳಹದಿಯ ಮೇಲೆ ಸ್ಥಾಪಿತವಾದ ಬೌದ್ಧ ಧರ್ಮ ಹಾಗೂ ಬುದ್ಧನ ಸಂದೇಶಗಳು ಪ್ರಸ್ತುತ ಸನ್ನಿವೇಶದಲ್ಲಿ ಜಗತ್ತಿಗೆ ಅತ್ಯವಶ್ಯಕವಾಗಿವೆ.

ಭಾರತೀಯ ಸಾಹಿತ್ಯದ ಮೂಲವು ಬೌದ್ಧ ಧರ್ಮದಲ್ಲಿರುವುದನ್ನು ಕಾಣುವುದರಿಂದ "ಅಶೋಕನು 'ಧಮ್ಮ' ಪ್ರಚಾರಕ್ಕಾಗಿ ಕೆತ್ತಿಸಿದ ಶಾಸನಗಳು ಈ ನಾಡಿಗೆ ಲಿಪಿಯನ್ನು ಪರಿಚಯಿಸಿದವು. ಕನ್ನಡ ಲಿಪಿಯ ಮೂಲ ಅಶೋಕನ 'ಬ್ರಾಹ್ಮಿ' ಲಿಪಿಯೇ ಆಗಿರುವದರಿಂದ ಕನ್ನಡ ಲಿಪಿಯ ಪ್ರಾಚೀನತೆಯು ಎರಡು ಸಾವಿರದ ಮುನ್ನೂರು ವರ್ಷಗಳಷ್ಟು ಹಿಂದಕ್ಕೆ ಹೋಗುತ್ತದೆ."[4] ಕನ್ನಡ ಲಿಪಿಯ ಮೂಲ ಅಶೋಕನ ಬ್ರಾಹ್ಮಿ ಲಿಪಿಯೇ ಆಗಿರುವುದರಿಂದ ಕನ್ನಡದಲ್ಲಿ ಬೌದ್ಧ ಸಾಹಿತ್ಯವಿತ್ತು ಎಂಬ ವಾದವನ್ನು ಎತ್ತಿ ಹಿಡಿದವರು – ಟಿ.ಎಸ್. ವೆಂಕಣ್ಣಯ್ಯನವರು. ಆದ್ದರಿಂದ ಟಿ.ಎಸ್.ವೆಂಕಣ್ಣಯ್ಯನವರ ಅಭಿಪ್ರಾಯಗಳನ್ನು ಹೀಗೆ ಸಂಗ್ರಹಿಸಬಹುದು. "ಬಹುಶಃ ಬೌದ್ಧರೇ ಕನ್ನಡ ಭಾಷೆಗೆ ಆದಿ ಕವಿಗಳು. ಕನ್ನಡ ನಾಡಿನಲ್ಲಿ ಬೌದ್ಧ ಮತವು ಪ್ರಾಬಲ್ಯಕ್ಕೆ ಬಂದ ಕಾಲದಿಂದ ಎಂದರೆ ಸುಮಾರು ಕ್ರಿ.ಶ.ದ ಆದಿಭಾಗದಿಂದಲೂ ಕನ್ನಡ ಭಾಷೆಯಲ್ಲಿ ಗ್ರಂಥ ರಚನೆಯಾಗುತ್ತಿದ್ದಿರಬೇಕು. ಪ್ರಾಚೀನ ಕಾಲದಲ್ಲಿ ಅದರಲ್ಲೂ ಬೌದ್ಧಮತ ಪ್ರಾಬಲ್ಯವು ನಾಶವಾದಂದಿನಿಂದ ಜೈನರು, ವೈದಿಕ ಮತಾನುಸಾರಿಗಳಾದ ಕವಿಗಳು ಗ್ರಂಥ ರಚನೆ ಮಾಡಿದರು ಬೌದ್ಧಮತದ ನಾಶದೊಂದಿಗೆ ಬೌದ್ಧಗ್ರಂಥ ನಾಶವೂ ಆಯಿತು."[5] ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಕನ್ನಡಕ್ಕೆ ಬೌದ್ಧರೇ ಆದಿಕವಿಗಳು, ಎಂಬ ವಾದವು ವೆಂಕಣ್ಣಯ್ಯನವರದಾಗಿದೆ. ಕನ್ನಡ ಸಾಹಿತ್ಯಕ್ಕೆ ಬೌದ್ಧಸಾಹಿತ್ಯವೇ ಮೂಲ ಎನ್ನುವದು ಇವರ ವಾದ. ಈ ವಾದವನ್ನು ಕೆಲವರು ಒಪ್ಪಿದ್ದಾರೆ. ಹಲವರು ಒಪ್ಪಿಲ್ಲ. ಟಿ.ಎಸ್.ವೆಂಕಣ್ಣಯ್ಯನವರ ವಾದವನ್ನು ವಿವರವಾಗಿ ಪ್ರೊ.ತಾಳ್ತಜೆ ವಸಂತಕುಮಾರರು ತಮ್ಮ ಸಂಶೋಧನ ಕೃತಿಯಲ್ಲಿ ಬೌದ್ಧಧರ್ಮ ಮತ್ತು ಕನ್ನಡ ಸಾಹಿತ್ಯದ ಬಗ್ಗೆ ವಿವರವಾಗಿ ವಿವರಿಸಿದ್ದಾರೆ. ಅದರ ಪ್ರಮುಖ ಅಂಶಗಳೆಂದರೆ,

"ಬಹುಶಃ ಬೌದ್ಧರೇ ಕನ್ನಡದ ಆದಿಕವಿಗಳು. ಕನ್ನಡ ದೇಶದಲ್ಲಿ ಬೌದ್ಧಮತವು ಪ್ರಾಬಲ್ಯಕ್ಕೆ ಬಂದ ಕಾಲದಿಂದ ಎಂದರೆ ಸುಮಾರು ಕ್ರಿ.ಶ.ದ ಆದಿಭಾಗದಿಂದಲೂ ಕನ್ನಡ ಭಾಷೆಯಲ್ಲಿ ಗ್ರಂಥ ರಚನೆಯಾಗುತ್ತಿದ್ದಿರಬೇಕು. ಮೊದಮೊದಲು ವಿಶೇಷವಾಗಿ ಗ್ರಂಥ ರಚನೆಗೆ ಮಾರ್ಗದರ್ಶಕವಾದವರು ಬೌದ್ಧರೇ ಆಗಿರಬಹುದು. ಜನಸಾಮಾನ್ಯರಲ್ಲಿ ಬೌದ್ಧಮತವನ್ನು ಹರಡಿ ಜನರನ್ನು ತಮ್ಮ ಮತಕ್ಕೆ ಆಕರ್ಷಣೆ ಮಾಡಿಕೊಳ್ಳಬೇಕೆಂದು ಬೌದ್ಧಲೇಖಕರ ಉದ್ದೇಶವಾಗಿದ್ದುದರಿಂದ ಆ ಕಾಲದಲ್ಲಿ ವೀರಶೈವ ಮತದ ಪ್ರಾದುರ್ಭಾವ ಕಾಲದಲ್ಲಿ ಆದಂತೆಯೇ ವಿಶೇಷವಾಗಿ ಗ್ರಂಥ ರಚನೆಯಾಗಿರಬಹುದು. ಪ್ರಾಚೀನ ಕಾಲದಲ್ಲಿ ಅದರಲ್ಲೂ ಬೌದ್ಧಮತ ಪ್ರಾಬಲ್ಯವು ನಾಶವಾದಂದಿನಿಂದ ಜೈನರು, ವೈದಿಕ ಮತಾನುಸಾರಿಗಳಾದ ಕವಿಗಳು ಗ್ರಂಥರಚನೆ ಮಾಡಿದರು. ಬೌದ್ಧಮತ ನಾಶದೊಂದಿಗೆ ಬೌದ್ಧಗ್ರಂಥಗಳ ನಾಶವೂ ಆಯಿತು. ಹೀಗಾದುದರಿಂದಲೇ ಕವಿರಾಜಮಾರ್ಗವು ದೊರಕದೆ ಹೋಗಿದ್ದರೆ, ಪ್ರಾಚೀನ ಕಾಲದಲ್ಲಿ ಕನ್ನಡ ಸಾಹಿತ್ಯವು ವಿಸ್ತಾರವಾಗಿಯೂ, ಉನ್ನತವಾಗಿಯೂ ಇದ್ದಿತೆಂದು ಊಹಿಸುವುದು ಅಸಾಧ್ಯವಾಗುತ್ತಿತ್ತು."[6] ಈ ವಾದವನ್ನು ಎಂ.ಗೋವಿಂದಪೈ ಒಪ್ಪಿದ್ದಾರೆ. ಜೈನರಿಗಿಂತ ಮೊದಲೇ ದಕ್ಷಿಣಕ್ಕೆ ಬಂದ ಬೌದ್ಧರು ಕನ್ನಡದಲ್ಲಿ ಕಾವ್ಯ ರಚನೆಗೆ ತೊಡಗಬಾರಬೇಕೆ? ಎಂಬುದು ಗೋವಿಂದಪೈ ಅವರ ಪ್ರಶ್ನೆ.

ಬೌದ್ಧರು ದಕ್ಷಿಣಕ್ಕೆ ಬಂದಾಗ, ದಕ್ಷಿಣ ಭಾಗದಲ್ಲಿ ಪ್ರಚಲಿತವಾಗಿದ್ದ ಪ್ರಾಕೃತವನ್ನು ಅವರು ಬಳಸಿರಬಹುದು. ಬೌದ್ಧರೇ ಕನ್ನಡದ ಆದಿ ಕವಿಗಳು ಎಂಬ ವಾದ ನಿರ್ಧಾರವಾದದ್ದು ಎನ್ನುತ್ತಾರೆ. ಟಿ.ಎಸ್.ವೆಂಕಣ್ಣಯ್ಯನವರು ಈ ವಿಚಾರವಾಗಿ "ಬ್ರಾಹ್ಮಣರು ದೇಶ ಭಾಷೆಯಲ್ಲಿ ಮತ ಪ್ರಚಾರಣೆಯನ್ನು ಮಾಡಲಿಲ್ಲ, ಸಂಸ್ಕೃತವನ್ನೇ ಉಪಯೋಗಿಸಿದರು. ಬೌದ್ಧರು ಮಾಡಿದ್ದರೂ ಮಾಡಿರಬಹುದು; ಆದರೆ ಆ ಕಾಲದಲ್ಲಿ ಪ್ರಾಕೃತವೇ ಹೆಚ್ಚು ಪ್ರಚಾರದಲ್ಲಿ ಇದ್ದುದರಿಂದ ಅದರಲ್ಲಿಯೇ ಬರೆದಿರಬಹುದು. ಕನ್ನಡದಲ್ಲಿ ಬರೆದಿದ್ದರೆ, ಕ್ರಿ.ಶ. 8-9ನೇಯ ಶತಮಾನದ ಹೊತ್ತಿಗೆ ಅವರು ದಕ್ಷಿಣ ದೇಶಕ್ಕೆ ಬಂದು ಅವರ ಮಠಗಳೆಲ್ಲ ನಾಶವಾದದ್ದರಿಂದ ಅವರ ಗ್ರಂಥಗಳು ನಾಶವಾಗಿರಬೇಕು".[7] ಆರ್. ನರಸಿಂಹಾಚಾರ್ಯರು ಕನ್ನಡದಲ್ಲಿ ಬೌದ್ಧ ಸಾಹಿತ್ಯ ಕುರಿತು ಹೀಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. "ಜೈನರ ಕಾಲಕ್ಕಿಂತ ಮೊದಲು ಬೌದ್ಧಕಾಲವೊಂದು ಕನ್ನಡ ಸಾಹಿತ್ಯದಲ್ಲಿ ಆಗಿರಬೇಕು ಎಂದು ಕೆಲವರು ವಿದ್ವಾಂಸರು ಸೂಚಿಸಿದ್ದಾರೆ. ತೆಲುಗು ವಿದ್ವಾಂಸರು ಕೆಲವರು ತಮ್ಮ ಸಾಹಿತ್ಯದ ವಿಷಯದಲ್ಲಿ ಕೂಡ ಇಂಥದೇ ಸೂಚನೆ ಮಾಡಿದ್ದಾರೆ. ತಮ್ಮ ಸಾಹಿತ್ಯದಲ್ಲಿ ಕೆಲವೇ ಜೈನ ಕೃತಿಗಳು ಉಳಿದು ಬಂದಿದ್ದರೂ ಬೌದ್ಧ ಕೃತಿಗಳು ಪೂರ್ತಿಯಾಗಿ ನಷ್ಟವಾಗಿವೆಯೆಂದು ಅವರು ಹೇಳಿದ್ದಾರೆ. ಬೇರೆ ಬೇರೆ ಕಾಲಗಳಲ್ಲಿ ಬೌದ್ಧರು, ಜೈನರು ಒಟ್ಟಿಗೆ ಬರೆದಿರುವದರಿಂದ ತಮಿಳಿನ ವಿಚಾರದಲ್ಲಿ ಹೀಗೆ ಒಂದಾದ ಮೇಲೆ ಒಂದು ಕಾಲವಿಭಾಗಗಳನ್ನು ಅಲ್ಲಿ ಹೇಳುವುದಿಲ್ಲ, ಸ್ವಲ್ಪವೇ ಇರುವ ಬೌದ್ಧ ಕೃತಿಗಳು ಇಲ್ಲಿ ಹನ್ನೊಂದನೆ ಶತಮಾನದವರೆಗೆ ಬೇರೆಯವರ ಕೃತಿಗಳ ಜೊತೆಜೊತೆಗೆ ಸಿಗುತ್ತವೆ. ಕನ್ನಡದಲ್ಲಿ ಬೌದ್ಧಕಾಲವೆಂಬುದು ಒಂದು ಇದ್ದಿತೋ, ಇಲ್ಲವೋ ಇಲ್ಲಿಯ

ಸಾಹಿತ್ಯವಂತೂ ಸಾಕಷ್ಟು ಪ್ರಾಚೀನವಾದದ್ದು''[8] ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಎಂ.ಎಂ.ಕಲಬುರ್ಗಿಯವರು, ಟ.ಎಸ್.ವೆಂಕಣ್ಣಯ್ಯನವರ ಅಭಿಪ್ರಾಯವನ್ನು ಸಮ್ಮತಿಸುತ್ತಾ ``ಈ ಅಗ್ರಮಾನ್ಯ ಕವಿಗಳ ನೆಗಳ್ತೆಯ ಕಾವ್ಯಗಳಲ್ಲಿ ಒಂದೂ ನಮ್ಮ ಕೈಗೆ ಉಳಿದು ಬಂದಿಲ್ಲ. ಶ್ರೀ ವಿಜಯನನ್ನು ಬಿಟ್ಟರೆ ಬೇರೊಬ್ಬನ ಸ್ಮರಣೆ ಇತ್ತೀಚಿನ ಕಾವ್ಯಗಳಲ್ಲಿ ಕಂಡುಬರುವುದಿಲ್ಲ.''[9] ಇದಕ್ಕೆ ಕಾರಣ ಇವರ ಬೌದ್ಧಮತವೆಂದು ವೆಂಕಣ್ಣಯ್ಯನವರು ಊಹಿಸಿರುವರು. ಸ್ತುತಿಸಬೇಕೆಂದರೆ ಹತ್ತನೇ ಶತಮಾನದಹೊತ್ತಿಗೆ ಕರ್ನಾಟಕದ ಬೌದ್ಧಮತ ಕೊನೆ ಉಸಿರಿನ ಸ್ಥಿತಿಯಲ್ಲಿದ್ದು, ಮುಂದೆ ಸಂತಾನಹೀನವಾಗಿದೆ. ಪುನರುತ್ಥಾನಗೊಂಡ ವೈದಿಕ ಧರ್ಮವು, ಪ್ರಬಲಗೊಂಡ ಜೈನಮತಗಳ ಮತ್ಸರದಿಂದಾಗಿ ಅದರ ಸಾಹಿತ್ಯವೂ ಕಾಲವಾಗಿದೆ ಎಂಬ ಅವರ ಹೇಳಿಕೆ ಬಹುಮಟ್ಟಿಗೆ ಸತ್ಯವೆನಿಸಿದೆ.

ಕನ್ನಡದ ಶ್ರೇಷ್ಠ ಕವಿಗಳಾದ ಟಿ.ಎಸ್.ವೆಂಕಣ್ಣಯ್ಯ, ಆರ್.ನರಸಿಂಹಚಾರ್, ಎಂ.ಗೋವಿಂದಪೈ. ಎಂ.ಎಂ.ಕಲಬುರ್ಗಿ ಮೊದಲಾದವರು ಕನ್ನಡದಲ್ಲಿ ಬೌದ್ಧ ಸಾಹಿತ್ಯದ ಅಸ್ತಿತ್ವವನ್ನು ಸಂದೇಶಿಸಿದ್ದಾರೆ. ಕನ್ನಡದಲ್ಲಿ ಪ್ರಾಚೀನ ಸಾಹಿತ್ಯವು ಪ್ರಾರಂಭವಾದದ್ದು ಬೌದ್ಧರಿಂದಲೇ ಎಂಬ ಮಾತುಗಳು ಕಂಡುಬರುತ್ತವೆ. ಆದರೂ ಕೂಡಾ ``ಬೌದ್ಧರು ಕನ್ನಡ ಭಾಷೆಗೆ ಆದಿಕವಿಗಳು ಸು.ಕ್ರಿ.ಶ. ಆದಿಭಾಗದಿಂದಲೂ ಕನ್ನಡ ಭಾಷೆಯಲ್ಲಿ ಗ್ರಂಥ ರಚನೆಯಾಗುತ್ತಿದ್ದಿರಬೇಕು. ಬೌದ್ಧಮತದ ನಾಶದೊಂದಿಗೆ ಬೌದ್ಧ ಗ್ರಂಥಗಳೂ ನಾಶವಾದವು.''[10] ಎಂದು ತಿಳಿದು ಬರುತ್ತದೆ. ಜೈನ ಮತ್ತು ವೈದಿಕ ಧರ್ಮಗಳ ಆಕ್ರಮಣಕ್ಕೆ ಒಳಗಾದ ಬೌದ್ಧ ಧರ್ಮ ಮತ್ತು ಬೌದ್ಧ ಸಾಹಿತ್ಯವು ಅಷ್ಟೆ ವೇಗವಾಗಿ ನಶಿಸಿ ಹೋಯಿತೆಂದು ಹೇಳಬಹುದು. ಜೈನರ ಕಾವ್ಯಗಳಲ್ಲಿ ಬೌದ್ಧ ಸಾಹಿತ್ಯದ ಅಂಶಗಳು ಕಂಡುಬರುತ್ತವೆ. ಪಂಪನು ತನ್ನ ಕಾವ್ಯದ ಶ್ರೇಷ್ಠತೆಯನ್ನು ಹೇಳುವಾಗ ತನ್ನ ಕಾವ್ಯವಾದ 'ವಿಕ್ರಮಾರ್ಜುನ ವಿಜಯ'ದಲ್ಲಿ ``ಮುನ್ನಿನ ಕಬ್ಬಮನೆಲ್ಲಮನಿಕ್ಕಿ ಮೆಟ್ಟಿದುವು'' ಎಂಬ ವಾಕ್ಯವು ಹಿಂದಿನ ಇತರ ಧರ್ಮದ ಕಾವ್ಯಗಳನ್ನು ಮೆಟ್ಟಿ ನಿಂತು ಶ್ರೇಷ್ಠವಾದ ಕಾವ್ಯ ರಚಿಸಿದ್ದೇನೆ ಎನ್ನುವಂತಹುದು. ಈ ವಾಕ್ಯದಲ್ಲಿ ಕಂಡುಬರುವ ಅಂಶವಾಗಿದೆ.

ಇನ್ನೊಂದು ಉತ್ತಮವಾದ ಉದಾಹರಣೆ ನೋಡುವುದಾದರೆ ರನ್ನನು ರಚಿಸಿದ 'ಅಜಿತಪುರಾಣ' ಕೃತಿಯಲ್ಲಿ ಬೌದ್ಧ ಸಾಹಿತ್ಯದಲ್ಲಿ ಪ್ರಸಿದ್ಧವಿರುವ ಕಿಸಾಗೌತಮಿಯ ಕತೆ ಯನ್ನು ಹೋಲುವ ವಿವರಣೆ ಬಂದಿದೆ ``ಬುದ್ದಿ ಸಾಗರನೆಂಬ ಮಂತ್ರಿಯು ಮಣಿ ಕೇತುವಿಗೆ ಸಾವಿಲ್ಲದ ಮನೆಯಿಂದ ಹುಲ್ಲನ್ನು. ಬೆಂಕಿಯನ್ನು ತೆಗೆದುಕೊಂಡು ಬರುವಂತೆ ಹೇಳುವ ಕಥೆಯು ಅಲ್ಲಿ ಬಂದಿದ್ದು ಇದು ಪ್ರಾಯಶಃ ಆ ಕಾಲದಲ್ಲಿ ಪ್ರಸಿದ್ಧವಿದ್ದು ಆವುದೋ ಬೌದ್ಧ ಸಾಹಿತ್ಯ ಕೃತಿಯಿಂದ ರನ್ನನು ಎರವಲಾಗಿ ಪಡೆದಿರಬೇಕು. ಆ ಬಗೆಯ ಬೌದ್ಧ ಕೃತಿಯು ಕನ್ನಡದಲ್ಲೇ ಇದ್ದಿರುವ ಸಾಧ್ಯತೆ ಇದೆ.''[11] ಎಂದು ಹೇಳಬಹುದು, ಮತ್ತು ಕನ್ನಡದ ಮೊದಲ ಉಪಲಬ್ಧ ಗದ್ಯಕೃತಿಯಾದ 'ವಡ್ಡಾರಾಧನೆ'ಯ ಕೃತಿಯಲ್ಲಿ ಬೌದ್ಧ ವಿಡಂಬನೆ ಬರುತ್ತದೆ. ಇತರೆ ಕೃತಿಗಳಾದ

ಬ್ರಹ್ಮಶಿವನ ಸಮಯ ಪರೀಕ್ಷೆ, ವೃತ್ತವಿಲಾಸನ-ಧರ್ಮ ಪರೀಕ್ಷೆ, ನಯಸೇನನ-ಧರ್ಮಾಮೃತ ಮುಂತಾದ ಕೃತಿಗಳಲ್ಲಿ ಬೌದ್ಧ ಧರ್ಮದ ವಿಡಂಬನೆ ಹಾಗೂ ನಿಂದನೆ ಕಂಡುಬರುತ್ತದೆ.

ಕ್ರಿ.ಪೂ.ಮೂರನೇ ಶತಮಾನದಲ್ಲಿ ಕರ್ನಾಟಕದಲ್ಲಿ ಅಧಿಕೃತವಾಗಿ ಪ್ರವೇಶಿಸಿದ ಬೌದ್ಧಧರ್ಮ ಹತ್ತು ಶತಮಾನಗಳ ಕಾಲ ಹರಡಿದ್ದ ದಟ್ಟ ಪುರಾವೆಗಳು ಸಿಗುತ್ತವೆ. ಪ್ರಾಚೀನ ಕಾಲದ ಕರ್ನಾಟಕದಲ್ಲಿದ್ದ ಬೌದ್ಧ ನೆಲೆಗಳೆಂದರೆ, ನಾಗಾವಿ, ಮೂಡುಬಿದಿರೆ, ಧರ್ಮಸ್ಥಳ, ಅಂಕೋಲ, ಉಡುಪಿ, ಬನವಾಸಿ, ಜೋಗ, ಬೆಳ್ಳಿಗಾವೆ, ಕೊಪ್ಪಳ, ಸನ್ನತಿ, ಸಿದ್ದಾಪುರ, ಮುಂತಾದ ಪ್ರದೇಶಗಳಾಗಿವೆ. ಇನ್ನೂ ಕರ್ನಾಟಕದಲ್ಲಿ ಉತ್ಖನನ ಮಾಡಿದರೆ ಹಲವು ಬೌದ್ಧ ನೆಲೆಗಳು ಸಿಗಬಹುದು.

ಕ್ರಿ.ಶ. ಒಂದು ಮತ್ತು ಎರಡನೇ ಶತಮಾನದಲ್ಲಿ ಬೌದ್ಧ ಧರ್ಮ ಪ್ರಬಲವಾಗಿತ್ತು. ಆ ಕಾಲದಲ್ಲಿ ಬೌದ್ಧರು, ಗ್ರಂಥರಚನೆ ಮಾಡದೆ ಬಿಟ್ಟಿರಲಾರರು. ಅಶೋಕನ ಕಾಲದಲ್ಲಿ ಬೌದ್ಧಮತವು ಕನ್ನಡ ನಾಡಿನಲ್ಲಿ ಹರಡಿತ್ತು. ಎನ್ನುವುದು ಆತನ ಶಾಸನಗಳಿಂದ ತಿಳಿದುಬರುತ್ತದೆ. "ಅಶೋಕನು ಶಿಲಾಶಾಸನಗಳನ್ನು ಬರೆಯಿಸಿದ್ದರ ಮಹಾ ಉದ್ದೇಶ ತನ್ನ ಪ್ರಜೆಗಳಿಗೆ ಧಮ್ಮವನ್ನು ಬೋಧಿಸಿ. ಅದನ್ನು ಬೆಳೆಸುವುದಾಗಿತ್ತು."[12] ಎಂದು ಹೇಳಬಹುದು. ಏಕೆಂದರೆ, ಅಶೋಕನ ಶಾಸನಗಳ ವಿವರಗಳನ್ನು ನೋಡಿದಾಗ ಅವು ಬೌದ್ಧ ಧಮ್ಮದ ಸಂದೇಶಗಳನ್ನು ಜನರಿಗೆ ಮುಟ್ಟಿಸುವುದಾಗಿತ್ತು.

ಕ್ರಿ.ಶ.ಪೂರ್ವ ಮೂರನೇ ಶತಮಾನದಲ್ಲಿ ಮೌರ್ಯರ ಶ್ರೇಷ್ಠ ದೊರೆಯಾದ ಅಶೋಕನ ಆಳ್ವಿಕೆಗೆ ಕರ್ನಾಟಕದ ಬಹುಭಾಗ ಪ್ರದೇಶವು ಒಳಪಟ್ಟಿತ್ತು. ಈತನಿಗೆ ಸಂಬಂಧಪಟ್ಟ ಹಲವು ಶಾಸನಗಳು ಕರ್ನಾಟಕದಲ್ಲಿ ದೊರೆತಿವೆ. ಕನ್ನಡದ ವಿಶೇಷ ಅಂಶ ಅಶೋಕನ ಬ್ರಹ್ಮಗಿರಿ ಶಾಸನದಲ್ಲಿ ಕಂಡುಬರುತ್ತದೆ. ಅದೇನೆಂದರೆ "ಅಶೋಕನ ಬ್ರಹ್ಮಗಿರಿ ಶಾಸನಗಳಲ್ಲಿ ಬರುವ 'ಇಸಿಲ' [ಕೋಟೆ ಇರುವ ಊರು] ಎಂಬ ಸ್ಥಳ ನಾಮವೇ ತೇದಿ ಇರುವ ಕನ್ನಡ ಭಾಷೆಯ ಮೊದಲ ಪದ."[13] ಎಂದು ಉಲ್ಲೇಖಿಸಲಾಗಿದೆ. ಆದ್ದರಿಂದ ಅಶೋಕನು ಕನ್ನಡ ಭಾಷೆಗೆ ಲಿಪಿಯನ್ನು ಪರಿಚಯಿಸಿದನು. ಮತ್ತು ಅಶೋಕನು ಬೌದ್ಧಮತ ಪ್ರಚಾರಕ್ಕಾಗಿ ವಿದೇಶಗಳಿಗೆ ಕಳುಹಿಸಿದ ಹಾಗೆ ಕರ್ನಾಟಕಕ್ಕೂ ಬೌದ್ಧಮತ ಪ್ರಚಾರಕರನ್ನು ಕಳುಹಿಸಿದ್ದ ಎಂಬ ಅಂಶಗಳು ಬೌದ್ಧ ಮತಕ್ಕೆ ಇಲ್ಲಿ ಮನ್ನಣೆ ಸಿಕ್ಕಿರಬಹುದೆಂದು ಸೂಚಿಸುತ್ತವೆ.

ಕ್ರಿ.ಶ.ಆರು ಮತ್ತು ಏಳನೆ ಶತಮಾನದವರೆಗೆ ಬೌದ್ಧ ಧರ್ಮ ಕನ್ನಡ ನಾಡಿನಲ್ಲಿ ಪ್ರಬಲವಾಗಿತ್ತು. ಬಾದಾಮಿಯ ಚಾಲುಕ್ಯರ ಕಾಲದಲ್ಲಿಯೂ ಬೌದ್ಧ ಧರ್ಮಕ್ಕೆ ಸಂಬಂಧಿಸಿದ ಗುಹಾಂತರ ದೇವಾಲಯಗಳು, ಚೈತ್ಯಾಲಯಗಳು ದೊರಕುತ್ತವೆ. ಚೈತ್ಯಾಲಯಗಳಲ್ಲಿ ಸಿಗುವ ಉಬ್ಬು ಶಿಲ್ಪಗಳು ಬುದ್ಧನ ಜೀವನಕ್ಕೆ ಸಂಬಂಧಿಸಿದ ಇತಿಹಾಸವನ್ನು ಹೇಳುವಂತಿದೆ. ಚಾಲುಕ್ಯರ ನಂತರ ಕರ್ನಾಟಕವನ್ನಾಳಿದ ಪಲ್ಲವರು ಕೂಡ ಬೌದ್ಧ ಧರ್ಮಕ್ಕೆ ವಿಶೇಷ ಪ್ರೋತ್ಸಾಹ ಕೊಟ್ಟಿದ್ದರು ಎಂದು ತಿಳಿದು ಬಂದಿದೆ. ಪ್ರಾಚೀನ ಕಾಲದಲ್ಲಿ ಭರತ ಖಂಡದ ಇತರ ಧರ್ಮಗಳ ಭಾಷೆ ಸಂಸ್ಕೃತವಾಗಿತ್ತು.

ಆದರೆ ಬೌದ್ಧ ಧರ್ಮ ಜನರ ಆಡು ಭಾಷೆಯಾದ 'ಪಾಳಿ' ಭಾಷೆಯನ್ನು ಬಳಸಿತು. ಆದ್ದರಿಂದ ಕರ್ನಾಟಕದಲ್ಲೂ ತಮ್ಮ ಮತ ಪ್ರಚಾರಕ್ಕೆ ಕನ್ನಡವನ್ನು ಬಳಸಿರಬಹುದು. ಬೌದ್ಧ ಮತದ ಪ್ರಚಾರಕ್ಕೆ ಹೊರಗಿನಿಂದ ಬಂದು ಅಂದರೆ ಪಾಶ್ಚಾತ್ಯ ದೇಶಗಳಿಂದ ಬಂದು ಕರ್ನಾಟಕದಲ್ಲಿಯೇ ಉಳಿದುಕೊಂಡು ಕನ್ನಡ ಕಲಿತು, ಕ್ರೈಸ್ತರಂತೆಯೇ ಕನ್ನಡದಲ್ಲಿ ಬೌದ್ಧ ಧರ್ಮಕ್ಕೆ ಸಂಬಂಧಿಸಿದ ಗ್ರಂಥಗಳು ರಚಿಸಿರಬಹುದು. ಉದಾ: ಬಾದಾಮಿ ಚಾಲುಕ್ಯರ ಕಾಲದಲ್ಲಿ ಹುಯೆನ್ ತ್ಸಾಂಗ್ ನು ಭಾರತಕ್ಕೆ ಬಂದು ಕರ್ನಾಟಕದಲ್ಲಿ ಉಳಿದುಕೊಂಡು ಅಧ್ಯಯನವನ್ನು ಕೈಗೊಂಡು ಕೃತಿ ರಚಿಸಿದ್ದು ನೆನಪಿಸಬಹುದು.

ದ್ರಾವಿಡ ಭಾಷೆಗಳಲ್ಲಿ ಒಂದಾದ ತಮಿಳು ಭಾಷೆಯಲ್ಲಿ ಬೌದ್ಧ ಧರ್ಮದ ಪ್ರಾಚೀನ ಕೃತಿಗಳು ದೊರಕುತ್ತವೆ. ಆದರೆ ತಮಿಳಿನಷ್ಟೇ ಪ್ರಾಚೀನವಾದ ಕನ್ನಡ ಭಾಷೆಯಲ್ಲಿ ಬೌದ್ಧ ಧಮ್ಮಕ್ಕೆ ಸಂಬಂಧಿಸಿದ ಯಾವುದೇ ಕೃತಿಯು ದೊರೆಯುವುದಿಲ್ಲ. ಆದ್ದರಿಂದ ಅದರ ಬಗ್ಗೆ ಬಹಳಷ್ಟು ಸಂಶೋಧನೆ ಕೈಗೊಳ್ಳುವುದು ಅವಶ್ಯಕವಾಗಿದೆ ಎಂದೆನಿಸುತ್ತದೆ. ಪ್ರಾಚೀನ ಬೌದ್ಧ ಕೃತಿಗಳು ಬಂಗಾಳಿ ಮತ್ತು ತಮಿಳು ಭಾಷೆಯಲ್ಲಿ ದೊರಕುತ್ತವೆ. "ಒಂಬತ್ತನೆ ಶತಮಾನದ ಮಧ್ಯ ಭಾಗದಲ್ಲಿ ರಚಿತವಾದ ಕವಿರಾಜಮಾರ್ಗವೇ ನಮಗೆ ದೊರೆತಿರುವ ಅತ್ಯಂತ ಪ್ರಾಚೀನ ಗ್ರಂಥ. ಅದಕ್ಕಿಂತ ಹಿಂದೆ ಕ್ರಿ.ಶ. ಆರಂಭದಿಂದಲೂ ಕನ್ನಡದಲ್ಲಿ ಗ್ರಂಥ ರಚನೆಯಾಗುತ್ತಿದ್ದಿರಬೇಕೆಂದು ಹಾಗೆಯೇ ರಚಿಸಿದವರಲ್ಲಿ ಬೌದ್ಧರು ಸಾಕಷ್ಟು ಸಂಖ್ಯೆಯಲ್ಲಿದ್ದಿರಬೇಕು. ಎಂದು ಪ್ರೊ. ಟಿ.ಎಸ್.ವೆಂಕಣ್ಣಯ್ಯನವರು ಪ್ರತಿಪಾದಿಸುತ್ತಾರೆ."[14] ಇವರ ವಾದವನ್ನು ಎತ್ತಿ ಹಿಡಿಯುವುದಾದರೆ, ಕವಿರಾಜ ಮಾರ್ಗಕಾರ ಹೇಳಿದ ಪೂರ್ವದಲ್ಲಿದ್ದ ಗದ್ಯ ಮತ್ತು ಪದ್ಯಗಳ ಹೆಸರುಗಳನ್ನು ಮಾತ್ರ ಹೇಳುತ್ತಾನೆ.

ಆದರೆ, ಅವರ ಕೃತಿಗಳ ಬಗ್ಗೆ ಎಲ್ಲಿಯೂ ಕೂಡ ಉಲ್ಲೇಖವಿಲ್ಲ ಮತ್ತು ಅವು ಇವತ್ತಿನವರೆಗೂ ದೊರೆತಿಲ್ಲ ಆದರೂ ಕೂಡ "ಕವಿರಾಜಮಾರ್ಗೋಕ್ತ ನಾಗಾರ್ಜುನ ಚಂದ್ರ, ಲೋಕಪಾಲರ ಬಗೆಗೆ ಇತರೆಡೆ ಸಿಗುವ ವಿವರಗಳನ್ನು ಗಮನಿಸಿದರೆ ಅವರು ಬೌದ್ಧರೆಂಬುದು ಸ್ಪಷ್ಟವಾಗುತ್ತದೆ. ಅವರ ಕನ್ನಡ ಕೃತಿಗಳು ಅನುಪಲಬ್ಧವಾದರೂ ಕವಿರಾಜಮಾರ್ಗವು ಅವರು ಕನ್ನಡದಲ್ಲಿ ಕೃತಿ ರಚಿಸಿದ ಬಗ್ಗೆ ಹೇಳುವುದರಿಂದ ಅವರು ಕನ್ನಡದ ಕೃತಿಕಾರರಲ್ಲಿ ಮೊದಲಿಗರಾಗುತ್ತಾರೆ."[15] ಹೀಗೆ ಕನ್ನಡದ ಆರಂಭಿಕ ಕೃತಿಗಳು ಬೌದ್ಧ ಧರ್ಮದ ಹಿನ್ನೆಲೆಯಲ್ಲಿ ಬಂದಿರಬೇಕು. ಅಂತಹ ಒಂದು ಕೃತಿಯೂ ಉಳಿಯದಂತೆ ನಾಶವಾಗಿರುವುದನ್ನು ಗಮನಿಸಿದರೆ ವ್ಯವಸ್ಥಿತವಾಗಿಯೇ ಅದನ್ನು ನಾಶಮಾಡಿದಂತೆ ಕಂಡುಬರುತ್ತದೆ. ಮೌರ್ಯ ಸಾಮ್ರಾಜ್ಯದ ದೊರೆ ಅಶೋಕನ ಕಾಲದಲ್ಲಿ ರಾಷ್ಟ್ರೀಯ ಧರ್ಮವಾಗಿ ಮೆರೆದಿದ್ದ ಬೌದ್ಧ ಧರ್ಮವು ಮೌರ್ಯರ ಕೊನೆಯ ದೊರೆಯಾದ ಬೃಹದ್ರಥನ ಕಾಲದಲ್ಲಿ ಅವನತಿಯ ಸ್ಥಿತಿಯನ್ನು ಹೊಂದಿತು. ಆ ಕಾಲದಲ್ಲಿ ವೈದಿಕ ಧರ್ಮವು ಪುನರುಜ್ಜೀವನ ಸ್ಥಿತಿಯಲ್ಲಿತ್ತು. ಬೃಹದ್ರಥನ ದಂಡನಾಯಕನಾಗಿರುವ ಪುಷ್ಯಮಿತ್ರ ಶುಂಗನೆಂಬ ಬ್ರಾಹ್ಮಣ ಬೃಹದ್ರಥನನ್ನು ಕೊಲೆಮಾಡುತ್ತಾನೆ. ನಂತರ ಬೌದ್ಧ ಧರ್ಮದ ನಾಶಕ್ಕೆ ತೊಡಗುತ್ತಾನೆ.

ಪುಷ್ಯಮಿತ್ರಶುಂಗನು ಭಾರತದೇಶದ ಚಕ್ರವರ್ತಿಯಾಗಿ, ತನ್ನ ಸೇನಾಪಡೆಗೆ ಆಜ್ಞೆಯನ್ನು ಹೊರಡಿಸುತ್ತಾನೆ. "ಬೌದ್ಧ ಭಿಕ್ಕುಗಳ ತಲೆಗಳನ್ನು ಕಂಡ ಕಡೆ ತುಂಡರಿಸಿ ಚೆಂಡಾಡುವಂತೆ ತನ್ನ ಸೈನಿಕರಿಗೆ ಆದೇಶ ನೀಡುತ್ತಾನೆ. ನಂತರವು ತಲೆಮರೆಸಿಕೊಂಡಿರುವ ಬೌದ್ಧ ಭಿಕ್ಕುಗಳ ತಲೆ ಕತ್ತರಿಸಿ ತೋರಿಸಿದವರಿಗೆ 100 ಚಿನ್ನದ ನಾಣ್ಯಗಳನ್ನು ಬಹುಮಾನ ಘೋಷಿಸುತ್ತಾನೆ. ನಳಂದ, ತಕ್ಷಶಿಲಾ ಮುಂತಾದ ಬೌದ್ಧ ವಿಶ್ವವಿದ್ಯಾನಿಲಯಗಳಿಗೆ ಬೆಂಕಿ ಹಚ್ಚಿ ಅಲ್ಲಿ ಸಂಗ್ರಹವಾಗಿದ್ದ ಅಪಾರ ಬೌದ್ಧ ಗ್ರಂಥಗಳನ್ನು ಬೌದ್ಧ ಚಾರಿತ್ರಿಕ ಸಾಹಿತ್ಯವನ್ನೂ ನಾಶಮಾಡುತ್ತಾನೆ. ಬುದ್ಧನ ಮಂದಿರಗಳನ್ನು, ಬೌದ್ಧ ವಿಹಾರಗಳನ್ನು ದೇವಾಲಯಗಳನ್ನಾಗಿ ಮಾರ್ಪಾಡು ಮಾಡುತ್ತಾನೆ."[16] ಹೀಗೆ ಭಾರತದಲ್ಲಿ ಒಂದು ಕಾಲದಲ್ಲಿ ರಾಷ್ಟ್ರೀಯ ಧರ್ಮವಾಗಿದ್ದ ಬೌದ್ಧಧರ್ಮ ಕರ್ನಾಟಕದಲ್ಲಿ ಇಂತಹ ಒಂದು ಪರಿಸ್ಥಿತಿ ನಡೆದಿರಬಹುದು ಎನ್ನುವುದಕ್ಕೆ ಪ್ರಾಚೀನ ಕನ್ನಡದಲ್ಲಿ ಬೌದ್ಧ ಧಮ್ಮಕ್ಕೆ ಸಂಬಂಧಿಸಿದ ಯಾವುದೇ ಕೃತಿ ದೊರೆಯದೇ ಇರುವುದು ಇದಕ್ಕೆ ಕಾರಣ ಎಂದು ಹೇಳಬಹುದು.

ಕನ್ನಡ ನಾಡಿನಲ್ಲಿ ಬರುವ ಕಲಬುರಗಿ ಜಿಲ್ಲೆಯ 'ಸನ್ನತಿಯಲ್ಲಿ' ಉತ್ಖನನ ಮಾಡಿದಾಗ ದೊರೆಯುವ ಬುದ್ಧನ ಮತ್ತು ಬೌದ್ಧ ಧಮ್ಮಕ್ಕೆ ಸಂಬಂಧಿಸಿದ ಅವಶೇಷಗಳು ನಾಶವಾಗಿರುವುದು ಪ್ರತ್ಯಕ್ಷ ಸಾಕ್ಷಿ ಎಂದು ಹೇಳಬಹುದು. ಮತ್ತು ಬೌದ್ಧ ಸಾಹಿತ್ಯ ನಾಶವಾಗಿರಬೇಕು. ಅದಕ್ಕಾಗಿ ಕನ್ನಡದಲ್ಲಿ ಯಾವುದೇ ಪ್ರಾಚೀನ ಬೌದ್ಧ ಕೃತಿ ದೊರೆತಿರುವುದಿಲ್ಲ ಎಂದು ಹೇಳಬಹುದು.

ಪುಷ್ಯಮಿತ್ರಶುಂಗನಿಂದ ಪ್ರಾರಂಭವಾದ ಬೌದ್ಧ ಧರ್ಮದ ಅವನತಿ 8(788–820)ನೇ ಶತಮಾನದಲ್ಲಿ ಶಂಕರಾಚಾರ್ಯರಿಂದ ಬೌದ್ಧ ಧರ್ಮ ಮತ್ತು ಬೌದ್ಧ ಭಿಕ್ಷುಗಳು ಲಕ್ಷಾಂತರ ಸಂಖ್ಯೆಯಲ್ಲಿ ಕೊಲ್ಲಲ್ಪಟ್ಟರು. ಎಂದು ತಿಳಿದು ಬರುತ್ತದೆ. "ಸ್ವತಃ ಶಂಕರಾಚಾರ್ಯರು ಕ್ರಿ.ಶ. 7ನೇ ಶತಮಾನದಲ್ಲಿ ಬೌದ್ಧ ಭಿಕ್ಷುಗಳನ್ನು ಸಂಹಾರ ಮಾಡುವ ಮೂಲಕ ಬೌದ್ಧ ವಿಹಾರಗಳನ್ನು ಧ್ವಂಸ ಮಾಡುವ ಮೂಲಕ ಹಿಂದೂ ಧರ್ಮದ ಪ್ರತಿಪಾದಕರಾಗಿ ಕಾಣಿಸಿಕೊಂಡರು. ಇತಿಹಾಸಕಾರರಾದ ಕನ್ನಿಂಗ್ ಹ್ಯಾಮರು "The most terrible antibuddhist was sage sankaracharya" ಎಂದು ಹೇಳಿದ್ದಾರೆ."[17]

ಪ್ರಾಚೀನ ಭಾರತದ ನಿಜವಾದ ಇತಿಹಾಸವನ್ನು ಅರಿಯುವುದಾದರೆ ಭಾರತದಲ್ಲಿನ ಹಲವು ದೇವಾಲಯಗಳು ಬೌದ್ಧ ವಿಹಾರಗಳಾಗಿದ್ದವು ಎಂದು ತಿಳದುಬರುತ್ತದೆ. ಅದಕ್ಕೆ ಸಂಬಂಧಿಸಿದ ಹಲವು ಶಾಸನಗಳು ದೊರೆತಿವೆ. ಶಂಕರಾಚಾರ್ಯರು ಪ್ರಥಮ ಬಾರಿ ದಕ್ಷಿಣ ಭಾರತದ ಶೃಂಗೇರಿಯಲ್ಲಿ ಮಠವನ್ನು ಸ್ಥಾಪಿಸಿದರು. ಆದರೆ ಅದಕ್ಕಿಂತ ಪೂರ್ವದಲ್ಲಿ ಶೃಂಗೇರಿಯು ಮತ್ತು ಅದರ ಸುತ್ತಮುತ್ತ ಬೌದ್ಧ ವಿಹಾರಗಳಿದ್ದವು, ಆದರೆ ಅವುಗಳು ಇಂದು ಹಿಂದೂ ದೇವಾಲಯಗಳಾಗಿ ಮಾರ್ಪಾಡು ಹೊಂದಿವೆ. ಪ್ರಾಚೀನ ಬೌದ್ಧ ದೇವಾಲಯಗಳೆಂದರೆ, ಉದಾ: ಕೊಲ್ಲೂರಿನ ಮೂಕಾಂಬಿಕೆ, ಕಾಂಚಿಪುರದ ಕಾಮಾಕ್ಷಿ ದೇವಾಲಯ,

ಧರ್ಮಸ್ಥಳದ ಮಂಜುನಾಥ, ಸನ್ನತಿಯ ಚಂದ್ರಲಾಂಬಾ ಪರಮೇಶ್ವರಿ ದೇವಾಲಯ, ರಾಜರಾಜೇಶ್ವರಿ ದೇವಾಲಯ ಇಂತಹ ಹಲವು ದೇವಾಲಯಗಳು, ಬೌದ್ಧ ದೇವತೆಗಳು ನಿಧಾನವಾಗಿ ವೈದಿಕ ಹಿಡಿತಕ್ಕೆ ಒಳಪಟ್ಟಿವೆ. ಆದರೆ ಬೌದ್ಧ ಧರ್ಮ ಹೇಗೆ ವೈದಿಕ ಧರ್ಮದ ಹಿಡಿತಕ್ಕೆ ಒಳಪಟ್ಟಿದೆ ಎನ್ನುವುದು ಆಳವಾದ ಸಂಶೋಧನೆಗಳ ಮೂಲಕ ತಿಳಿಯಬೇಕಾಗಿದೆ. ವೈದಿಕ ಧರ್ಮ ಮತ್ತು ಬೌದ್ಧ ಧರ್ಮದ ಸಾಹಿತ್ಯದ ವಿಷಯವನ್ನು ಅಭಿವ್ಯಕ್ತಿಸುವಾಗ. ಡಾ.ಬಿ.ಆರ್.ಅಂಬೇಡ್ಕರ್ ಅವರು "ಭಗವದ್ಗೀತೆ ಸಾಲಗಾರನಾದರೆ, ಬೌದ್ಧ ಧರ್ಮ ಅದಕ್ಕೆ ಸಾಲ ಕೊಟ್ಟಿದ್ದು ಎಂದರ್ಥ" ಎನ್ನುತ್ತಾರೆ. ಆದ್ದರಿಂದ ಬೌದ್ಧ ಸಾಹಿತ್ಯವು, ವೈದಿಕ ಮತ್ತು ಜೈನ ಸಾಹಿತ್ಯಕ್ಕೂ ಮಾರ್ಗದರ್ಶನದಂತಿದೆ. ಭಾರತದಲ್ಲಿನ ಹಲವು ಬೌದ್ಧ ಕೇಂದ್ರಗಳು ಜೈನರಿಂದಲು ಆನಂತರ ಶೈವರ ಆಕ್ರಮಣಕ್ಕೂ ಒಳಗಾಗಿವೆ. ಅದನ್ನು ತಿಳಿಸುವ ಶಾಸನಾಧಾರಗಳು ಮತ್ತು ಪ್ರಾಕ್ತನ ಪುರಾವೆಗಳು ನಮಗಿಂದು ದೊರೆಯುತ್ತವೆ. ಭಾರತದಲ್ಲಿನ ಬೌದ್ಧ ದೇವಾಲಯಗಳು ವೈದಿಕರ, ಜೈನರ ಮತ್ತು ಶೈವರ ಹಿಡಿತದಲ್ಲಿ ಒಳಪಟ್ಟವೋ ಹಾಗೆಯೇ ಬೌದ್ಧ ಸಾಹಿತ್ಯವೂ ಬ್ರಾಹ್ಮಣ ಪುಷ್ಯಮಿತ್ರಶುಂಗ ಮತ್ತು ಶಂಕರಾಚಾರ್ಯರಿಂದ ನಾಶವಾಗಿ ಹೋಯಿತು ಎಂದು ಹೇಳಬಹುದು. ಪುಷ್ಯಮಿತ್ರಶುಂಗನ ಕಾಲದಲ್ಲಿ 'ನಳಂದಾ' 'ತಕ್ಷಶಿಲಾ' ಬೌದ್ಧ ವಿಶ್ವವಿದ್ಯಾನಿಲಯಗಳು ಬೆಂಕಿಗೆ ಆಹುತಿಯಾಗಿ, ವರ್ಷಾನುಗಟ್ಟಲೆ ಸುಟ್ಟು ಹಾಳಾದವೋ, ಹಾಗೆಯೇ ಕನ್ನಡ ನಾಡಿನಲ್ಲಿ ಬೌದ್ಧ ಧಮ್ಮ ಮತ್ತು ಬೌದ್ಧ ಸಾಹಿತ್ಯ ನಶಿಸಲು ಅದ್ವೈತ ಸಿದ್ಧಾಂತದ ಆಗಮನ, ಜೈನರ ಪ್ರಾಬಲ್ಯ, ಭಕ್ತಿ ಪ್ರಧಾನವಾದ ಅಲ್ಪಸಂಖ್ಯಾತ ಮತಗಳ ಬೆಳವಣಿಗೆ ಈ ಮೊದಲಾದ ಅಂಶಗಳು ಕಾರಣವಾಗಿರಬೇಕು ಎನ್ನಲಾಗುತ್ತದೆ. "ಸುಮಾರು ಕ್ರಿ.ಶ.10–11ನೇಯ ಶತಮಾನಗಳ ಅವಧಿಯಲ್ಲಿ ಕನ್ನಡ ನಾಡಿನಾದ್ಯಂತ ಬೌದ್ಧ ವಿನಾಶದ ವ್ಯವಸ್ಥಿತ ಪ್ರಯತ್ನ ನಡೆಯಿತಾದ್ದರಿಂದ ಆ ಕಾಲದಲ್ಲಿ ಬೌದ್ಧರ ಕನ್ನಡ ಕೃತಿಗಳೂ ಬೌದ್ಧ ನೆಲೆಗಳೊಂದಿಗೆ ಮಣ್ಣುಗೂಡಿರಬೇಕು"[18] ಎಂದು ಹೇಳಬಹುದು.

ಕರ್ನಾಟಕದಲ್ಲಿ ಬೌದ್ಧ ಧರ್ಮದ ಪ್ರಾಬಲ್ಯಕಾಲ ಕ್ರಿ.ಪೂ.3 ಮತ್ತು 4ನೇ ಶತಮಾನದ ಕಾಲ ಎಂದು ಹೇಳಬಹುದು. ಆಗಿನ ಕಾಲದಲ್ಲಿ ಕರ್ನಾಟಕದಲ್ಲಿ ದೊರೆತ ಶಾಸನಗಳು ಬೌದ್ಧ ಧರ್ಮದ ಅಸ್ತಿತ್ವವನ್ನು ಸೂಚಿಸುತ್ತವೆ. ಆಗ ಪ್ರಾಕೃತವೂ ನಂತರ ಸಂಸ್ಕೃತವೂ ಆಡಳಿತ ಭಾಷೆಯಾಗಿತ್ತು. ಎಂಬುದಕ್ಕೆ ಆಗಿನ ಕಾಲದ ಶಾಸನಗಳು ಆ ಭಾಷೆಗಳಲ್ಲಿರುವುದೇ ಸಾಕ್ಷಿ. ಕನ್ನಡದಲ್ಲಿ ಶಾಸನ ಬರವಣಿಗೆಯಾಗಿದ್ದೇ ಕ್ರಿ.ಶ. 450ರ ಹಲ್ಮಿಡಿ ಶಾಸನದ ಬರವಣಿಗೆ. ಇದೇ ಕನ್ನಡದ ಮೊಟ್ಟಮೊದಲ ಶಾಸನ. ಕ್ರಿ.ಪೂ.3 ಮತ್ತು 4ನೇ ಶತಮಾನಗಳಲ್ಲಿ ಕನ್ನಡ ಕೇವಲ ಆಡು ಭಾಷೆಯಾಗಿದ್ದಿರಬಹುದು. ಕವಿರಾಜಮಾರ್ಗಕಾರ ಹೇಳುವ ನಾಗಾರ್ಜುನ, ಚಂದ್ರ, ಲೋಕಪಾಲ, ವಿಮಳೋದಯ, ಮೊದಲಾದವರು ಬೌದ್ಧರಾಗಿರಬಾರೇಕೆ? ಎನ್ನುವ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿದಿದೆ. ಆದ್ದರಿಂದ ಹಲವು ಸಂಶೋಧನೆಗಳನ್ನು ಕೈಗೊಳ್ಳಬೇಕಾಗಿರುವುದು ಅವಶ್ಯಕವಾಗಿದೆ. ಈ ವಿಷಯದ ಕುರಿತು ಡಾ॥ ತಾಳ್ತಜೆ ವಸಂತಕುಮಾರ ಅವರು 'ಬೌದ್ಧಾಯನ' ಎಂಬ ಸಂಶೋಧನಾ ಕೃತಿಯಲ್ಲಿ

ವಿವರಿಸಲು ಪ್ರಯತ್ನಪಟ್ಟಿದ್ದಾರೆ.

ಪ್ರಾಚೀನಕಾಲದ ಬೌದ್ಧಸಾಹಿತ್ಯ ನಾಶವಾದರೂ ಇತರ ಭಾಷೆಗಳಲ್ಲಿ ಬೌದ್ಧ ಸಾಹಿತ್ಯವನ್ನು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಭಾಷಾಂತರಿಸಲಾಗಿದೆ. ಮತ್ತು ಹಲವು ಸೃಜನಶೀಲ ಕವಿಗಳು–ನಾಟಕಗಳು, ಕಥೆಗಳು, ಕಾದಂಬರಿಗಳು, ಕಾವ್ಯಗಳು ಮತ್ತು ಮಹಾಕಾವ್ಯಗಳನ್ನು ರಚಿಸುವುದರ ಮೂಲಕ ಬೌದ್ಧಸಾಹಿತ್ಯವು ಮತ್ತೆ ಶ್ರೀಮಂತಿಕೆಯನ್ನು ಕಾಣುವಂತೆ ಮಾಡಿದ್ದಾರೆ. ಪ್ರಮುಖರಲ್ಲಿ ಜಿ.ಪಿ.ರಾಜರತ್ನಂ, ಬಿದರೆ ಅಶ್ವತ್ಥನಾರಾಯಣ, ಕುವೆಂಪು, ಮಾಸ್ತಿವೆಂಕಟೇಶ ಅಯ್ಯಂಗಾರ, ಮನ ಜವರಯ್ಯ, ಸಿದ್ದಲಿಂಗಯ್ಯ, ವೈ.ಬಿ.ನಂದನ, ಸಿ.ಹೆಚ್.ರಾಜಶೇಖರ, ಡಾ.ಪ್ರಭುಶಂಕರ, ಡಾ.ಶಿವರಾಮಕಾರಂತ, ಬಿ.ಪುಟ್ಟಸ್ವಾಮಿ, ಸಿ.ಎನ್.ಶೆಟ್ಟಿ, ಶಂಕರಾನಂದ, ಡಾ.ತಾಳ್ತಜೆ ವಸಂತಕುಮಾರ, ಡಾ.ಟಿ.ಎಂ.ಭಾಸ್ಕರ್, ಡಾ.ಎಲ್.ಬಸವರಾಜ, ಡಾ.ಬಸವರಾಜ ಸಬರದ, ಎಸ್.ಎಂ.ಜನವಾಡಕರ, ಕಾಶಿವಿಶ್ವನಾಥಶೆಟ್ಟಿ, ಬುದ್ಧಣ್ಣ ಹಿಂಗಾಮಿರೆ, ಡಾ.ಲತಾರಾಜಶೇಖರ್, ಹೆಚ್.ಎಸ್.ವೆಂಕಟೇಶಮೂರ್ತಿ ಹೀಗೆ ಕನ್ನಡದ ಹಲವು ಸಾಹಿತಿಗಳು ಬೌದ್ಧ ಸಾಹಿತ್ಯವನ್ನು ಶ್ರೀಮಂತಗೊಳಿಸಿರುವುದನ್ನು ಕಾಣಬಹುದಾಗಿದೆ.

**ಕೊನೆ ಟಿಪ್ಪಣಿಗಳು:**

1. ಸದಾಶಿವ ಕೆ., ಪ್ರಾಚೀನ ಭಾರತದ ಇತಿಹಾಸ ಚರಿತ್ರೆ (ಅಧ್ಯಾಯ 5), ಪ್ರಕಾಶನದ ಸ್ಥಳ ಲಭ್ಯವಿಲ್ಲ: ಪ್ರಕಾಶಕರ ಹೆಸರು ಲಭ್ಯವಿಲ್ಲ, ಪು.ಸಂ. 99.
2. ಸದಾಶಿವ ಕೆ., ಪ್ರಾಚೀನ ಭಾರತದ ಇತಿಹಾಸ ಚರಿತ್ರೆ (ಅಧ್ಯಾಯ 5), ಪ್ರಕಾಶನದ ಸ್ಥಳ ಲಭ್ಯವಿಲ್ಲ: ಪ್ರಕಾಶಕರ ಹೆಸರು ಲಭ್ಯವಿಲ್ಲ, ಪು.ಸಂ. 99.
3. ಮಳಲಿ ವ. ಸು., (2013), "ಕನ್ನಡಿಗರಿಗೆ ಬೇಡವಾದನೇ ಬುದ್ಧ" (ಪ್ರಜಾವಾಣಿ ಪತ್ರಿಕೆ), ಬೆಂಗಳೂರು: ಪ್ರಜಾವಾಣಿ, ಪು.ಸಂ. 06.
4. ವ. ಸು. ಮಳಲಿ, (2013), "ಕನ್ನಡಿಗರಿಗೆ ಬೇಡವಾದನೇ ಬುದ್ಧ" (ಪ್ರಜಾವಾಣಿ ಪತ್ರಿಕೆ), ಬೆಂಗಳೂರು: ಪ್ರಜಾವಾಣಿ, ಪು.ಸಂ. 06.
5. ಚಿದಾನಂದ ಮೂರ್ತಿ ಎಂ., (1966), ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಬೆಂಗಳೂರು: ಸ್ವಪ್ನ ಬುಕ್ ಹೌಸ್, ಪು.ಸಂ. 137.
6. ತಾಳ್ತಜೆ ವಸಂತಕುಮಾರ, (2005), ಬೌದ್ಧಾಯನ, ಮುಂಬಯಿ: ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ಪು.ಸಂ. 167.
7. ತಾಳ್ತಜೆ ವಸಂತಕುಮಾರ, (2005), ಬೌದ್ಧಾಯನ, ಮುಂಬಯಿ: ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ಪು.ಸಂ. 16.
8. ತಾಳ್ತಜೆ ವಸಂತಕುಮಾರ, (2005), ಬೌದ್ಧಾಯನ, ಮುಂಬಯಿ: ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ಪು.ಸಂ. 263.
9. ತಾಳ್ತಜೆ ವಸಂತಕುಮಾರ, (2005), ಬೌದ್ಧಾಯನ, ಮುಂಬಯಿ: ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ಪು.ಸಂ. 265.

10. ಮುಗಳಿ ರಂ. ಶ್ರೀ., (2016), ಕನ್ನಡ ಸಾಹಿತ್ಯ ಚರಿತ್ರೆ, ಮೈಸೂರು: ಗೀತಾ ಬುಕ್ ಹೌಸ್, ಪು.ಸಂ. 39.
11. ತಾಳ್ತಜೆ ವಸಂತಕುಮಾರ, (2005), ಬೌದ್ಧಾಯನ, ಮುಂಬಯಿ: ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ಪು.ಸಂ. 271.
12. ಭಗವಾನ್ ಕೆ. ಎಸ್., (1990), ಹಿಂದೂ ಸಾಮ್ರಾಜ್ಯ ಶಾಹಿಯ ಇತಿಹಾಸ, ಮೈಸೂರು: ಮಹಿಮೆ ಪ್ರಕಾಶನ, ಪು.ಸಂ. 106.
13. ಶೇಷಗಿರಿರಾವ್ ಎಲ್. ಎಸ್. ಮತ್ತು ಇತರರು, (1990), ಕನ್ನಡ, ಕನ್ನಡಿಗ, ಕರ್ನಾಟಕ, ಬೆಂಗಳೂರು: ಸ್ವಪ್ನ ಬುಕ್ ಹೌಸ್, ಪು.ಸಂ. 36.
14. ಚಿದಾನಂದ ಮೂರ್ತಿ ಎಂ., (1966), ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಬೆಂಗಳೂರು: ಸ್ವಪ್ನ ಬುಕ್ ಹೌಸ್, ಪು.ಸಂ. 137.
15. ತಾಳ್ತಜೆ ವಸಂತಕುಮಾರ, (2005), ಬೌದ್ಧಾಯನ, ಮುಂಬಯಿ: ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ಪು.ಸಂ. 281.
16. ಹೆಣ್ಣೂರು ಲಕ್ಷ್ಮೀನಾರಾಯಣ, (2007), ಅಸ್ಪೃಶ್ಯರು ಮತ್ತು ಶೂದ್ರರು ಉದ್ಧಾರಕರು, ಬೆಂಗಳೂರು: ಮೂಲ ನಿವಾಸಿ ಶೂದ್ರಾತಿಶೂದ್ರ ಅಧ್ಯಯನ ಕೇಂದ್ರ, ಪು.ಸಂ. 34.
17. ವಿಜಯಾ ಮಹೇಶ, ಬಹುಜನರ ಇತಿಹಾಸ, ಮೈಸೂರು: ಪ್ರಬುದ್ಧ ಪ್ರಕಾಶನ, ಪು.ಸಂ. 54.
18. ತಾಳ್ತಜೆ ವಸಂತಕುಮಾರ, (2005), ಬೌದ್ಧಾಯನ, ಮುಂಬಯಿ: ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ಪು.ಸಂ. 281.

## ಪರಾಮರ್ಶನ ಗ್ರಂಥಗಳು:


1. ಮಳಲಿ ವ. ಸು., (2013), "ಕನ್ನಡಿಗರಿಗೆ ಬೇಡವಾದನೇ ಬುದ್ಧ" (ಪ್ರಜಾವಾಣಿ ಪತ್ರಿಕೆ: 15–10–2013), ಬೆಂಗಳೂರು: ಪ್ರಜಾವಾಣಿ.
2. ಚಿದಾನಂದ ಮೂರ್ತಿ ಎಂ., (1966), ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಬೆಂಗಳೂರು: ಸ್ವಪ್ನ ಬುಕ್ ಹೌಸ್.
3. ತಾಳ್ತಜೆ ವಸಂತಕುಮಾರ, (2005), ಬೌದ್ಧಾಯನ, ಮುಂಬಯಿ: ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ.
4. ಹೆಣ್ಣೂರು ಲಕ್ಷ್ಮೀನಾರಾಯಣ, (2007), ಅಸ್ಪೃಶ್ಯರು ಮತ್ತು ಶೂದ್ರರು ಉದ್ಧಾರಕರು, ಬೆಂಗಳೂರು: ಮೂಲ ನಿವಾಸಿ ಶೂದ್ರಾತಿಶೂದ್ರ ಅಧ್ಯಯನ ಕೇಂದ್ರ.
5. ವಿಜಯಾ ಮಹೇಶ, ಬಹುಜನರ ಇತಿಹಾಸ, ಮೈಸೂರು: ಪ್ರಬುದ್ಧ ಪ್ರಕಾಶನ.
6. ಭಗವಾನ್ ಕೆ.ಎಸ್., (1990), ಹಿಂದೂ ಸಾಮ್ರಾಜ್ಯ ಶಾಹಿಯ ಇತಿಹಾಸ, ಮೈಸೂರು: ಮಹಿಮೆ ಪ್ರಕಾಶನ.
7. ಶೇಷಗಿರಿರಾವ್ ಎಲ್.ಎಸ್. ಮತ್ತು ಇತರರು, (1990), ಕನ್ನಡ, ಕನ್ನಡಿಗ, ಕರ್ನಾಟಕ, ಬೆಂಗಳೂರು: ಸ್ವಪ್ನ ಬುಕ್ ಹೌಸ್.
8. ಸದಾಶಿವ ಕೆ., ಪ್ರಾಚೀನ ಭಾರತದ ಇತಿಹಾಸ ಚರಿತ್ರೆ, ಮೈಸೂರು: ಚೇತನ ಬುಕ್ ಹೌಸ್.